# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:28-02-2024ರಂದು ಗುರುವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ವೆಂಕಟೇಶ್, ಎಸ್., ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ವಿಜಯಕುಮಾರ್, ಹೆಚ್.ಬಿ., ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ., ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಪ್ರೊ. ಚಂದ್ರಶೇಖರ್ ಕೆ. | ಸದಸ್ಯರು |
| 8. | ಡಾ. ಸಣ್ಣಹನುಮಪ್ಪ ಜಿ, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಅನಂತ ಎಸ್, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪರಮೇಶ ಮಸಲವಾಡ ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಅರುಣಾ ಎ. ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ವಿಶ್ವವಿದ್ಯಾಲಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000, ಪ್ರಕರಣ-28(ಎಫ್)ರನ್ವಯ ಸಿಂಡಿಕೇಟ್‌ಗೆ ನಾಮನಿರ್ದೇಶಿತ ಪ್ರಾಂಶುಪಾಲರುಗಳಾದ ಡಾ. ಪರಮೇಶ ಮಸಲವಾಡ, ಶ್ರೀ ವೀರಭದ್ರೇಶ್ವರ ಶಿಕ್ಷಣ ಮಹಾವಿದ್ಯಾಲಯ, ತಾಳಗುಂದ ಹಾಗೂ ಡಾ.ಅರುಣಾ, ಎ., ಪಿ.ಇ.ಎಸ್. ಇನ್ಸಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಶಿವಮೊಗ್ಗ ಇವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2024-ಸಿಂ-2.01 (5.01):** ದಿನಾಂಕ:16-06-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:16-06-2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳ ಕುರಿತಾಗಿ ಈವರೆಗೂ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗದಿರುವುದರಿಂದ ನಡಾವಳಿಗಳನ್ನು ಕುಲಸಚಿವರು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿ ಅನುಮೋದನೆ ಕೋರಿದರು. ಚರ್ಚೆಯ ನಂತರ ದಿನಾಂಕ:16-06-2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**2024–ಸಿಂ–2.01 (5.02):** ದಿನಾಂಕ:21–06–2023 ರಂದು ನಡೆದ ವಿಶೇಷ ಸಿಂಡಿಕೇಟ್‌ನ ಸಭಾ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:21–06–2023ರಂದು ನಡೆದ ವಿಶೇಷ ಸಿಂಡಿಕೇಟ್‌ನ ಸಭಾ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2024–ಸಿಂ–2.01 (5.02ಎ):** ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

**ನಿರ್ಣಯ:** ದಿನಾಂಕ:02–12–2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ: **2023–ಸಿಂ–7.19**ರಲ್ಲಿ ಸಿಂಡಿಕೇಟ್‌ನಿಂದ ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್ ಸದಸ್ಯರಾದ ಶ್ರೀ ಶಶಿಧರ್ ಬಿ.ಎನ್. ಇವರನ್ನು ನಾಮನಿರ್ದೇಶನ ಮಾಡಿರುವುದರಿಂದ ಈ ಸಭೆಗೆ ಮಂಡಿಸಿರುವ ವಿಷಯವನ್ನು ಕೈಬಿಡಲಾಯಿತು.

**2024–ಸಿಂ–2.01 (5.02ಬಿ):** ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್‌ನಿಂದ ಓರ್ವ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

**ನಿರ್ಣಯ:** ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಾಗ್ರಂಇ/ನಿಕ/ಬಿ2/06/2021–22/1408, ದಿನಾಂಕ:22–06–2023ರಲ್ಲಿನ ಕೋರಿಕೆಯ ಮೇರೆಗೆ ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಗೆ ವಿಶ್ವವಿದ್ಯಾಲಯದ ಸಿಂಡಿಕೇಟ್‌ನಿಂದ ಡಾ.ಸಣ್ಣಹನುಮಪ್ಪ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ ಇವರ ಹೆಸರನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

**2024–ಸಿಂ–2.01 (5.03):** ಶಾಲಾ ಪರಿಕಲ್ಪನೆಯ School of Chemical Scienceಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ School of Chemical Science ನ ನಿರ್ದೇಶಕರಾಗಿದ್ದ, ಪ್ರೊ.ಕೆ.ಎಂ. ಮಹಾದೇವನ್ ಇವರು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕವಾಗಿದ್ದರಿಂದ ತೆರವಾದ ಸ್ಥಾನಕ್ಕೆ School of Chemical Science ನ ನಿರ್ದೇಶಕರಾಗಿ ಪ್ರೊ.ಎ.ಎನ್. ರಾಜೇಶ್ವರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ನೇಮಕ ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–2.01 (5.04):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಿರುವುದನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

| ಕ್ರ ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ. ಸುಧಾ | ಪ್ರಾಧ್ಯಾಪಕರು | ಭೌತಶಾಸ್ತ್ರ |
| 02 | ಡಾ. ಪ್ರಶಾಂತ ನಾಯಕ, ಜಿ. | ಪ್ರಾಧ್ಯಾಪಕರು | ಸಮಾಜಕಾರ್ಯ |
| 03 | ಡಾ. ಉದ್ದಗಟ್ಟಿ ವೆಂಕಟೇಶ | ಪ್ರಾಧ್ಯಾಪಕರು | ರಾಜ್ಯಶಾಸ್ತ್ರ |
| 04 | ಡಾ. ಸಂತೋಷ್ ಕುಮಾರ್, ಹೆಚ್.ಎಸ್., | ಸಹ ಪ್ರಾಧ್ಯಾಪಕರು | ಜೈವಿಕ ತಂತ್ರಜ್ಞಾನ |



Scanned with OKEN Scanner

**2024–ಸಿಂ–2.01 (5.05):** ವೃತ್ತಿಪದೋನ್ನತಿ (CAS) ಸಂಬಂಧದ BoA/Screening-Cum-Evaluation ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**2024–ಸಿಂ–2.01 (5.05.ಅ):** ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕ ಹುದ್ದೆಯಿಂದ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರಿಗೆ ಪ್ರಾಧ್ಯಾಪಕ ಹುದ್ದೆಯಿಂದ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್., ಅಡಿಯಲ್ಲಿ ವೃತ್ತಿಪದೋನ್ನತಿಗಾಗಿ ದಿನಾಂಕ:13–07–2023 ರಂದು ನಡೆದ ಆಯ್ಕೆ ಸಮಿತಿಯ ಸಭೆಯಲ್ಲಿ ಯು.ಜಿ.ಸಿ. ನಿಯಮಾನುಸಾರ ಪರಿಶೀಲಿಸಿ, ಈ ಕೆಳಗಿನಂತೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಸ್ನಾತಕೋತ್ತರ ಅಧ್ಯಯನ ವಿಭಾಗಗಳು | | | | |
| ಪ್ರೊ.ಬಿ.ಎಸ್.ಬಿರಾದಾರ | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 04–09–2016 |
| ಪ್ರೊ.ಪದ್ಮಮ್ಮ, ಎಸ್. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 01–01–2023 |

**2024–ಸಿಂ–2.01 (5.05.ಆ):** ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧ್ಯಾಪಕರಿಗೆ ಸಹ–ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್., ಅಡಿಯಲ್ಲಿ ವೃತ್ತಿಪದೋನ್ನತಿಗಾಗಿ ದಿನಾಂಕ:13–07–2023ರಂದು ಬಿ.ಓ.ಎ., ಸಭೆಯ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ.ದೇವಿದಾಸ ಗೈಬಣ್ಣ, ಬಿ. | ಭೌತಶಾಸ್ತ್ರ | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 05–06–2023 |
| ಡಾ.ಸತ್ಯಪ್ರಕಾಶ್, ಎಂ.ಆರ್. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಪಿ.ಜಿ.) | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 27–07–2023 |
| ಡಾ. ಮಂಜುನಾಥ, ಕೆ.ಆರ್. | ನಿರ್ವಹಣಾಶಾಸ್ತ್ರ (ಎಂ.ಬಿ.ಎ.) | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 27–07–2023 |

**2024–ಸಿಂ–2.01 (5.05.ಇ):** ಸ್ನಾತಕ ಘಟಕ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ. ಬದಲಾವಣೆಯ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಅಧ್ಯಾಪಕರಿಗೆ ಸಹ–ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ, ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್. ಅಡಿಯಲ್ಲಿ ವೃತ್ತಿಪದೋನ್ನತಿಗಾಗಿ ದಿನಾಂಕ:13–07–2023ರಂದು ನಡೆದ B.O.A. ಸಭೆಯ ಶಿಫಾರಸ್ಸು ಮತ್ತು ಘಟಕ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ. ಬದಲಾವಣೆಯ ವೃತ್ತಿಪದೋನ್ನತಿಗಾಗಿ Screening



ಕುಲಸಚಿವರು

Scanned with OKEN Scanner

Cum Evaluation ಸಮಿತಿ ಸಭೆಯು ಈ ಕೆಳಗಿನಂತೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ. ಮಹದೇವಸ್ವಾಮಿ, ಕೆ.ಎನ್. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 21-02-2023 |
| ಡಾ.ಇಬ್ರಾಹಿಂ ಖಲೀಲುಲ್ಲ ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ | ಇಂಗ್ಲಿಷ್ | ಸಹಾಯಕ ಪ್ರಾಧ್ಯಾಪಕ Level 12 | ಸಹ ಪ್ರಾಧ್ಯಾಪಕ Level 13 | 23-01-2023 |
| ಡಾ.ಶಿವಾನಂದಸ್ವಾಮಿ, ಕೆ.ಆರ್. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | ಇಂಗ್ಲಿಷ್ | ಸಹಾಯಕ ಪ್ರಾಧ್ಯಾಪಕ AGP Level 11 | ಸಹಾಯಕ ಪ್ರಾಧ್ಯಾಪಕ AGP Level 12 | 25-01-2021 |

**024-ಸಿಂ-2.01 (5.05.ಈ):** ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಯು.ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ ಇಲ್ಲಿನ ಈ ಕೆಳಕಂಡ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ (C.A.S.) ಸಂಬಂಧದ ದಿನಾಂಕ:13-07-2023ರಂದು ನಡೆದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ.ವಸಂತಕುಮಾರ್, ಟಿ., | ಕನ್ನಡ | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 16-05-2023 |

**024-ಸಿಂ-2.01 (5.05.ಉ):** ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಧ್ಯಾಪಕರುಗಳಿಗೆ ಸ್ಥಾನೀಕರಣ ದಿನಾಂಕವನ್ನು ಪರಿಷ್ಕರಿಸಿ ಮರು ನಿಗದಿಪಡಿಸುವ ಸಂಬಂಧದ B.O.A. ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಈ ಕೆಳಕಂಡ ಪ್ರಾಧ್ಯಾಪಕರುಗಳು, ಪ್ರಾಧ್ಯಾಪಕ ಹುದ್ದೆಗೆ ಈಗಾಗಲೇ ನೀಡಿರುವ ವೃತ್ತಿ ಪದೋನ್ನತಿಯ ಸ್ಥಾನೀಕರಣದ ದಿನಾಂಕವನ್ನು ಪರಿಷ್ಕರಿಸಿ ಮರು ನಿಗದಿಪಡಿಸುವಂತೆ ಸಲ್ಲಿಸಿರುವ ಮನವಿಯನ್ನು ದಿನಾಂಕ:16-06-2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಗೆ ಮಂಡಿಸಿಸಲಾಗಿತ್ತು. ಆದರೆ, ಯುಜಿಸಿ ಮತ್ತು ಸರ್ಕಾರದ ನಿಯಮಗಳು ಹಾಗೂ ವಿಶ್ವವಿದ್ಯಾಲಯದ ಪರಿನಿಯಮ ಮುಂತಾದವುಗಳನ್ನು ಪರಿಶೀಲಿಸಿ, ಇನ್ನೊಮ್ಮೆ ಬಿ.ಓ.ಎ ಸಭೆಯಲ್ಲಿ ಮಂಡಿಸಿ, ಬಿ.ಓ.ಎ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬೇಕೆಂದು ನಿರ್ಣಯಿಸಲಾಗಿರುತ್ತದೆ. ಅದರಂತೆ, ದಿನಾಂಕ:13-07-2023 ರಂದು ನಡೆದ B.O.A ಸಭೆಗೆ ಪ್ರಸ್ತಾವನೆ ಮಂಡಿಸಲಾಗಿದ್ದು, ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಅನುಮೋದನೆಗೆ ಮಂಡಿಸಿದೆ ಎಂದರು.

Scanned with OKEN Scanner

| ಅಧ್ಯಾಪಕರ ಹೆಸರು | ವಿಭಾಗ | ಎ.ಜಿ.ಪಿ. ಹಂತ | ಹಿಂದಿನ ಬಿ.ಓ.ಎ. ಶಿಫಾರಸು ಮಾಡಿದ ದಿನಾಂಕ | ಶಿಫಾರಸ್ಸು ಮಾಡಿದ ಪರಿಷ್ಕೃತ ಅರ್ಹತಾ ದಿನಾಂಕ |
|---|---|---|---|---|
| **ಸ್ನಾತಕೋತ್ತರ ಅಧ್ಯಯನ ವಿಭಾಗಗಳು – ಅರ್ಹತಾ ದಿನಾಂಕ ಪರಿಷ್ಕರಣೆ** | | | | |
| ಡಾ. ಪ್ರಹ್ಲಾದಪ್ಪ, ಎಂ.ಹೆಚ್.. | ರಾಜ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ,. ಧನಂಜಯ, ಕೆ.ಬಿ., | ಅರ್ಥಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ಪೂರ್ವಾಚಾರ್ | ಸಮಾಜಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ಮೇಟಿ ಮಲ್ಲಿಕಾರ್ಜುನ | ಇಂಗ್ಲಿಷ್ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ. ಸಿರಾಜ್ ಅಹ್ಮದ್ | ಇಂಗ್ಲಿಷ್ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ. ಅವಿನಾಶ್, ಟಿ., | ಇಂಗ್ಲಿಷ್ | ಪ್ರಾಧ್ಯಾಪಕ | 19–03–2021 | 19–12–2020 |
| ಡಾ. ಸರಳಾ, ಕೆ.ಎಸ್., | ವಾಣಿಜ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ಕುಂದನ್ ಬಸವರಾಜ್ | ವಾಣಿಜ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ಸಿ.ಕೆ. ರಮೇಶ್ | ಜೈವಿಕ ತಂತ್ರಜ್ಞಾನ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ರಾಜೇಶ್ವರಿ, ಎನ್., | ಸಸ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ರಮೇಶ್ ಬಾಬು, ಹೆಚ್.ಎನ್., | ಸಸ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ. ಪರಮೇಶ್ವರ ನಾಯ್ಕ, ಟಿ., | ಸಸ್ಯಶಾಸ್ತ್ರ | ಪ್ರಾಧ್ಯಾಪಕ | 19–03–2021 | 13–04–2019 |
| ಡಾ.ಓಂಕಾರಪ್ಪ, ಆರ್. | ಸೂಕ್ಷ್ಮಾಣು ಜೀವಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ.ಮಲ್ಲಿಕಾರ್ಜುನ, ಎನ್., | ಸೂಕ್ಷ್ಮಾಣು ಜೀವಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ. ಸಂತೋಷ್ ಕುಮಾರ್, ಕೆ.ಟಿ., | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಪ್ರಾಧ್ಯಾಪಕ | 19–03–2021 | 01–03–2019 |
| ಡಾ.ಕೃಷ್ಣಮೂರ್ತಿ, ಜಿ., | ರಸಾಯನ ಶಾಸ್ತ್ರ | ಪ್ರಾಧ್ಯಾಪಕ | 19–03–2021 | 18–07–2018 |
| ಡಾ. ಲತಾ, ಕೆ.ಪಿ., | ರಸಾಯನ ಶಾಸ್ತ್ರ | ಪ್ರಾಧ್ಯಾಪಕ | 19–03–2021 | 07–01–2019 |

ದಿನಾಂಕ:13–07–2023 ರಂದು ನಡೆದ B.O.A ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು ಸ್ಥಾನೀಕರಣ ದಿನಾಂಕಗಳ ಪರಿಷ್ಕರಣೆಯನ್ನು ಜಾರಿಗೊಳಿಸುವ ಕುರಿತಾಗಿ ಮಾರ್ಗದರ್ಶನ ಕೋರಿ ಸರ್ಕಾರಕ್ಕೆ ಪತ್ರ ಬರೆಯಬೇಕು, ಸರ್ಕಾರದಿಂದ ಮಾಹಿತಿ ಬಂದ ನಂತರ ಸ್ಥಾನಿಕರಣದ ದಿನಾಂಕಗಳ ಪರಿಷ್ಕರಣೆ ಕುರಿತು ಆದೇಶ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿತು.

**2024–ಸಿಂ–2.01 (5.05ಎ):** ಶ್ರೀ ರಂಗರಾಜು, ಕೆ., ಸಹಾಯಕ ಪ್ರಾಧ್ಯಾಪಕರು – ಇವರಿಗೆ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮುಂಗಡ ಪಾವತಿಸಿರುವ ಆದೇಶದ ಸ್ಥಿರೀಕರಣ ಕುರಿತು.



Scanned with OKEN Scanner

ನಿರ್ಣಯ: ಶ್ರೀ ರಂಗರಾಜು, ಕೆ., ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ - ಇವರು ಬ್ರೈನ್‌ಸ್ಟ್ರೋಕ್ ಸಂಬಂಧಿತ ಶಸ್ತ್ರಚಿಕಿತ್ಸೆಯನ್ನು ಶಿವಮೊಗ್ಗದ ಚಂದ್ರಗಿರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತುರ್ತಾಗಿ ಪಡೆಯುವ ಸಲುವಾಗಿ, ಆಸ್ಪತ್ರೆಯವರು ನೀಡಿದ ಅಂದಾಜುಪಟ್ಟಿಯ ಪ್ರಕಾರ ಶೇ.50ರಷ್ಟು ಮೊಬಲಗು ರೂ.1,25,000/-(ರೂಪಾಯಿ ಒಂದು ಲಕ್ಷದ ಇಪ್ಪತ್ತೈದು ಲಕ್ಷ ಮಾತ್ರ)ಗಳನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಎ.ಸಿ., ಬಿಲ್ಲಿನ ಮೂಲಕ ಮುಂಗಡವಾಗಿ ಪಾವತಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.01 (5.05ಬಿ):** 2023-24ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರಾದ ಶ್ರೀ ಶಂಕರಪ್ಪ, ಬಿ., ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 95ರ ಪ್ರಕಾರ 60ನೇ ವಯಸ್ಸಿಗೆ ದಿನಾಂಕ:29-02-2024ರಂದು ವಯೋನಿವೃತ್ತಿ ಹೊಂದಲು ಅನುಮತಿ ನೀಡಲು ಸಭೆಯು ನಿರ್ಣಯಿಸಿತು.

**2024-ಸಿಂ-2.01 (5.05ಸಿ):** ವಿಲೀನಿಕರಣಗೊಂಡ ನೌಕರರಿಗೆ ನಿವೃತ್ತಿ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧ ಪರಿಶೀಲನಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ 1989 ರಿಂದ 2006ರವರೆಗೆ ಸಂಚಿತವೇತನದ ಆಧಾರದ ಮೇಲೆ ನೇಮಕಗೊಂಡು, ನಂತರ ವಿವಿಧ ದಿನಾಂಕಗಳಂದು ಸೇವಾ ಸಕ್ರಮಗೊಂಡು ಹಾಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಸಂಚಿತ ವೇತನ ಆಧಾರದ ಅಡಿಯಲ್ಲಿ ಸಲ್ಲಿಸಿದ ಸೇವೆಯನ್ನು ನಿವೃತ್ತಿ ವೇತನ, ವೇತನ ನಿಗದಿ ಮತ್ತು ರಜೆ ಸೌಲಭ್ಯಗಳಿಗೆ ಸಂರಕ್ಷಿಸಿ ಪರಿಗಣಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯು ದಿನಾಂಕ:[illegible]-05-2023 ರಂದು ಸಭೆ ಸೇರಿ ಸಿದ್ಧಪಡಿಸಿರುವ ಸಲ್ಲಿಸಿರುವ ವರದಿಯನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಇದನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ನೇಮಕಗೊಂಡು ವಿಲೀನೀಕರಣಗೊಂಡ ಎಲ್ಲಾ ನೌಕರರಿಗೆ (ದಾವಣಗೆರೆ ವಿಶ್ವವಿದ್ಯಾಲಯ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಇತ್ಯಾದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರೂ ಸೇರಿದಂತೆ) ಅನ್ವಯಿಸಬೇಕೆಂದು ಸದಸ್ಯರಾದ ಶ್ರೀ ಶಾಂತಕುಮಾರ್, ಜಿ.ಎಸ್.ರವರು ತಿಳಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ 1989 ರಿಂದ 2006ರವರೆಗೆ ಸಂಚಿತವೇತನದ ಆಧಾರದ ಮೇಲೆ ನೇಮಕಗೊಂಡು, ನಂತರ ಸೇವಾ ಸಕ್ರಮಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರು ಸಂಚಿತ ವೇತನ ಆಧಾರದ ಅಡಿಯಲ್ಲಿ ಸಲ್ಲಿಸಿದ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಸಂರಕ್ಷಿಸಿ ಪರಿಗಣಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯು ಸಲ್ಲಿಸಿದ ವರದಿಯನ್ನು ಸಭೆಯು ಅಂಗೀಕರಿಸಿತು. ಈ ವರದಿಯನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ನೇಮಕಗೊಂಡು ವಿಲೀನೀಕರಣಗೊಂಡ ಎಲ್ಲಾ ನೌಕರರಿಗೆ (ದಾವಣಗೆರೆ ವಿಶ್ವವಿದ್ಯಾಲಯ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರೂ ಸೇರಿದಂತೆ) ಅನುಷ್ಠಾನಗೊಳಿಸಲು ನಿರ್ಣಯಿಸಲಾಯಿತು.

ಮುಂದುವರೆದು, ವಿಲೀನೀಕರಣಗೊಂಡ ನೌಕರರಿಗೆ ಸೇವಾ ಜೇಷ್ಠತೆ, ಆರ್ಥಿಕ ಸೌಲಭ್ಯ, ಮುಂಬಡ್ತಿ ಮುಂತಾದ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ನಿರ್ಣಯ ತೆಗೆದುಕೊಂಡಿರುವ ದಿನಾಂಕ:16-10-2020 ರಂದು ನಡೆದ ಸಿಂಡಿಕೇಟ್ ಸಭೆ ನಡಾವಳಿಯ ವಿಷಯ ಸಂಖ್ಯೆ2020-ಸಿಂ-06.04(ಇ)ನ್ನು ಹಿಂಪಡೆಯಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**2024-ಸಿಂ-2.01 (5.05ಡಿ):** ವಿಶ್ವವಿದ್ಯಾಲಯದ ಅನುಮೋದಿತ ವಕೀಲರುಗಳಿಗೆ ಪ್ರಸ್ತುತ ನೀಡುತ್ತಿರುವ ದರಗಳನ್ನು ಪರಿಷ್ಕರಿಸುವ ಕುರಿತು.



ಕುಲಸಚಿವರು

Scanned with OKEN Scanner

**ನಿರ್ಣಯ:** ವಿಶ್ವವಿದ್ಯಾಲಯದ ವ್ಯಾಜ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ನೇಮಕಾತಿ ಮಾಡಿಕೊಂಡಿರುವ ವಕೀಲರುಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಶುಲ್ಕದ ದರಗಳನ್ನು ಈ ಕೆಳಗಿನಂತೆ ಪರಿಷ್ಕರಿಸಿ ಪಾವತಿಸಲು ಸಭೆಯು ಅನುಮೋದಿಸಿತು.

a) At the High Court of Karnataka:

1) **Writ Petitions as Respondent:** Rs.15,000/- per Writ Petition as Respondent from appearance to disposal and an additional amount of Rs.5,000/- towards filing the statement of Objections, etc.

2) **For a batch of Similar Writ Petitions:** For the first case Rs.15,000/- and for the rest Rs.3,000/- per Writ Petition, subject to a maximum of Rs.25,000/- from appearance to disposal

3) **Statement of Objection:** Rs.5,000/- towards filing statement of objection, additional amount will not be paid to file statement of objection in linked or common cases

4) **Writ petition as petitioner:** Rs.25,000/- per Writ Petition from appearance to Disposal wherein University is petitioner.

5) **Writ Appeals as Respondent:** Rs.10,000/- per Writ appeal as Respondent from appearance to disposal and an additional amount of Rs.5,000/- towards filing the Statement of objections etc.,

6) **For filing Writ Appeals as Appellants:** Rs.10,000/- per Writ Appeal from appearance to disposal, and additional of Rs.10,000/- will be paid incurred during filling of appeals. For filing Caveat Petition Rs.3,000/- per Case.

b) At Local Courts/Other Courts:

**1)** **Civil Suit/ any other Nature of case as a defendant**: Rs.8,000/- per Civil Suit/ any other nature of case from appearance to disposal and an additional amount of Rs.2,000/- towards filing the written statement/ objection statement etc.

**2)** **Civil Suits/ any other Nature of case when filed by University**: Rs.10,000/- per Civil Suit/ any other nature of case from appearance to disposal.

c) **At Supreme Court of India:**

For dealing with Supreme Court cases or engaging Senior Advocates under exceptional Circumstances, the Vice- Chancellor is authorized to fix the fee having regard to the importance of such cases.

d) **Fee for Senior Advocates in the High Court:**
The Vice-Chancellor is authorized to fix fee to the Senior Advocates whenever such services are undertaken in the interest of University.

e) **Legal Opinion:** for Bangalore panel of Advocates Rs.5,000/-

f) The Vice-Chancellor is authorized to fix the fee in respect of all other cases which are not covered above.

**2024–ಸಿಂ–2.01 (5.05.ಇ):** ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಗೆ ಪ್ರೊ. ಎಸ್.ಕೆ. ನರಸಿಂಹಮೂರ್ತಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000, ಪ್ರಕರಣ 24ರ ಪ್ರಕಾರ ನಿರ್ದೇಶಕರಾಗಿ ನೇಮಕ ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಮುಂದುವರೆದು, ಪಿ.ಎಂ.ಇ. ಮಂಡಳಿಯು ಶಾಸನಬದ್ಧ ಮಂಡಳಿಯಾಗಿದ್ದು, ಇದರ ಈವರೆಗಿನ ಕಾರ್ಯಚಟುವಟಿಕೆಗಳ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

## ಅಭಿವೃದ್ಧಿ ವಿಭಾಗ

**2024-ಸಿಂ-2.01 (5.06) :** ರೇಡಿಯೋ ಶಿವಮೊಗ್ಗ ಇವರೊಂದಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳಿಗೆ ಶೈಕ್ಷಣಿಕ, ಸಂಶೋಧನೆ, ತರಬೇತಿ ಮತ್ತು ಪ್ರತಿಭೆಗಳ ಅಭಿವೃದ್ಧಿಯ ಸಲುವಾಗಿ ಭಾರತ ಸರ್ಕಾರದ Ministry of Information and Broadcasting ಇವರಿಂದ ಮಾನ್ಯತೆ ಪಡೆದಿರುವ Radio Shivamogga FM90.8 MHz ಇವರೊಂದಿಗೆ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಡಿಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ಪ್ರಕರಣ 29(2)(ಬಿ) ಅನುಸಾರ ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

**2024-ಸಿಂ-2.01 (5.07) :** ಕಂಪ್ಯೂಟರ್, ಪ್ರಿಂಟರ್ ಮತ್ತು ವಾಟರ್ ಫಿಲ್ಟರ್ ಸರಬರಾಜು ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರದ ನಿರ್ದೇಶನದ ಮೇರೆಗೆ ವಿಶ್ವವಿದ್ಯಾಲಯವು ತನ್ನ ಕಾರ್ಯವ್ಯಾಪ್ತಿಯಲ್ಲಿ 12 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದು, ಸದರಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಭಾಗವಾಗಿ ಶಾಲೆಗಳಿಂದ ಬಂದ ಕೋರಿಕೆ ಹಾಗೂ ವಿಶ್ವವಿದ್ಯಾಲಯ ರಚಿಸಿದ್ದ ಸಮಿತಿಯ ಶಿಫಾರಸ್ಸಿನ ಮೇರೆಗೆ ಕಂಪ್ಯೂಟರ್, ಪ್ರಿಂಟರ್ ಮತ್ತು ವಾಟರ್ ಫಿಲ್ಟರ್‌ಗಳನ್ನು ಖರೀದಿಸುವ ಸಲುವಾಗಿ ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

**2024-ಸಿಂ-2.01 (5.08) :** ವಿಶ್ವವಿದ್ಯಾಲಯ ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜಿಗೆ ಡೆಸ್ಕ್‌ಟಾಪ್ ಕಂಪ್ಯೂಟರ್ ಖರೀದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ನೇರ ಆಡಳಿತಕ್ಕೆ ಒಳಪಟ್ಟಿರುವ ವಿಶ್ವವಿದ್ಯಾಲಯ ಎಸ್.ಎಂ.ಆರ್. ಕಲಾ ಮತ್ತು ವಾಣಿಜ್ಯ ಕಾಲೇಜಿನ ಬಿ.ಸಿ.ಎ., ಕೋರ್ಸ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಹಿನ್ನೆಲೆಯಲ್ಲಿ, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ, ಮೊದಲ ಹಂತದಲ್ಲಿ 10 ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು ಪರಿಕರಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000 ಪ್ರಕರಣ 4 ಇ (i)ರಪ್ರಕಾರ ಖರೀದಿಸುವ ವೆಚ್ಚ ಜಿ.ಎಸ್.ಟಿ. ಸೇರಿ ರೂ.4,98,000/- (ನಾಲ್ಕು ಲಕ್ಷದ ತೊಂಭತ್ತೆಂಟು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಸರಬರಾಜು ಸಂಸ್ಥೆಯಾದ ಮೆ:ಯಶಸ್ವಿ ಎಂಟರ್‌ಪ್ರೈಸಸ್, ಶಿವಮೊಗ್ಗ ಇವರಿಗೆ ಪಾವತಿಸಲು ಸಭೆಯು ಅನುಮೋದಿಸಿತು.

## ಪ್ರಸಾರಾಂಗ

**2024-ಸಿಂ-2.01 (5.09) :** ಕುವೆಂಪು ವಿಶ್ವವಿದ್ಯಾಲಯದ ಪ್ರಸಾರಾಂಗದ ಕೈಪಿಡಿಯನ್ನು ಅನುಮೋದಿಸುವ/ಅನುಷ್ಠಾನಗೊಳಿಸುವ ಕುರಿತು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಪ್ರಸಾರಾಂಗ ಕೈಪಿಡಿಯ ಕರಡು ಪ್ರತಿಯನ್ನು ಅನುಮೋದಿಸಿದ ಸಭೆಯು, ಅಕ್ಷರದೋಷ ಹಾಗೂ ವ್ಯಾಕರಣದೋಷಗಳನ್ನು ತಿದ್ದುಪಡಿ ಮಾಡಿ ಪುಸ್ತಕ ರೂಪದಲ್ಲಿ ಮುದ್ರಿಸಲು ಕ್ರಮವಹಿಸಬೇಕೆಂದು ಸಭೆಯು ನಿರ್ಣಯಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2024-ಸಿಂ-2.01 (5.10):** ಭದ್ರಾವತಿಯ ಡಿ. ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿನ ಸಂಯೋಜನೆ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾಹಿತಿ ನೀಡಿ ಮಾತನಾಡುತ್ತಾ, ಭದ್ರಾವತಿಯ ಡಿ.ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿಗೆ 2022-23ನೇ ಸಾಲಿನಲ್ಲಿ PAR (Performance Apprisal Report) ಸಲ್ಲಿಸಿಲ್ಲವೆಂಬ ಕಾರಣದಿಂದ ಎನ್.ಸಿ.ಟಿ.ಇ.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಮಾನ್ಯತೆ ನವೀಕರಿಸಿರಲಿಲ್ಲ. ಆದುದರಿಂದ, ಸದರಿ ಕಾಲೇಜಿನವರು ಎನ್.ಸಿ.ಟಿ.ಇ., ವಿರುದ್ಧ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆದರೆ, ಸದರಿ ತಡೆಯಾಜ್ಞೆ 2022-23ನೇ ಸಾಲಿಗೆ ಸೀಮಿತಗೊಂಡಿದ್ದರಿಂದ 2023-24ನೇ ಸಾಲಿನಲ್ಲಿ ಸ್ಥಳೀಯ ತಪಾಸಣಾ ಸಮಿತಿಯು ಸದರಿ ಕಾಲೇಜಿನ ಮುಂದುವರೆದ ಸಂಯೋಜನೆಗೆ ಶಿಫಾರಸ್ಸು ಮಾಡಿರಲಿಲ್ಲ. ಈ ನಡುವೆ 2023-24ನೇ ಸಾಲಿನಲ್ಲಿ ಕೂಡ ಎನ್.ಸಿ.ಟಿ.ಇ. ಮಾನ್ಯತೆ ನೀಡುವಂತೆ ಸದರಿ ಕಾಲೇಜಿನವರೂ ಸೇರಿದಂತೆ ಒಂದು ಒಕ್ಕೂಟದ ಮೂಲಕ ದೆಹಲಿ ಉಚ್ಛನ್ಯಾಯಾಲಯದ ಮೊರೆ ಹೋಗಿದ್ದು, ಘನ ನ್ಯಾಯಾಲಯವು ಪ್ರತಿವರ್ಷ PAR ಸಲ್ಲಿಸುವುದು ಸಮರ್ಥನೀಯವಲ್ಲ ಎಂದು ಪರಿಗಣಿಸಿ ಕಾಲೇಜುಗಳ ಒಕ್ಕೂಟದ ಪರವಾಗಿ ತೀರ್ಪು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ, ಕಾನೂನು ಸಲಹೆ ಪಡೆದುಕೊಂಡು ಸದರಿ ಕಾಲೇಜಿಗೆ ಮತ್ತೊಂದು ಸ್ಥಳೀಯ ತಪಾಸಣಾ ಸಮಿತಿ ಭೇಟಿ ನೀಡಿದ್ದು, ಸಂಯೋಜನೆ ಮುಂದುವರಿಸಲು ಶಿಫಾರಸ್ಸು ಮಾಡಿದ್ದು, ಇದನ್ನು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಭದ್ರಾವತಿಯ ಡಿ.ಕೆ. ಶಿವಕುಮಾರ್ ಶಿಕ್ಷಣ ಕಾಲೇಜಿನ 2022-23ನೇ ಸಾಲಿನ ಸಂಯೋಜನಾ ವರದಿಯನ್ನು ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**2024-ಸಿಂ-2.01 (5.11):** ದಿನಾಂಕ:16-05-2023 ಹಾಗೂ 17-05-2023 ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 36(3)ರನ್ವಯ ವಿಶ್ವವಿದ್ಯಾಲಯದ 2023-24ನೇ ಸಾಲಿನ ಪರೀಕ್ಷಕರ ನೇಮಕಾತಿ ಮಂಡಳಿಗಳನ್ನು ರಚಿಸಿ, ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಪರೀಕ್ಷಾ ಮಂಡಳಿಗಳು ತುರ್ತಾಗಿ ತೊಡಗಿಕೊಳ್ಳಬೇಕಾಗಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಪರೀಕ್ಷಕರ ನೇಮಕಾತಿ ಮಂಡಳಿಗಳ ಶಿಫಾರಸ್ಸಿನ ಪ್ರಕಾರ ವಿವಿಧ ಪರೀಕ್ಷಾ ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.01 (5.11.ಎ):** 33ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನ ಮಾಡುವ ಸ್ವರ್ಣಪದಕಗಳ ಖರೀದಿಯ ದರವನ್ನು ಸ್ಥಿರೀಕರಿಸಿ ಅನುಮೋದಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡುವ ಸ್ವರ್ಣಪದಕಗಳನ್ನು ಸರಬರಾಜು ಮಾಡಲು ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ಮೆ:ನವೀನ್ ಎಂಟರ್‌ಪ್ರೈಸಸ್ ಬೆಂಗಳೂರು ಇವರೊಂದಿಗೆ ಪ್ರತಿ ಪದಕಕ್ಕೆ ರೂ.2,310/-ಗಳ ದರದಲ್ಲಿ ಖರೀದಿಸಲು ದಿನಾಂಕ:14-06-2022 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ, ದಿನಾಂಕ:22-07-2023ರಂದು ನಡೆದ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು 136 ಸ್ವರ್ಣಪದಕಗಳನ್ನು ಸಿದ್ಧಪಡಿಸಿ ಸರಬರಾಜು ಮಾಡುವಂತೆ ಆದೇಶ ನೀಡಿದಾಗ, ಸರಬರಾಜು ಸಂಸ್ಥೆಯವರು ಪ್ರಸ್ತುತ ಮೂಲ ಲೋಹದ ಬೆಲೆಯು ಗಣನೀಯವಾಗಿ ಹೆಚ್ಚಳವಾಗಿರುವ ಕಾರಣದಿಂದ ಹಳೆಯ ದರದಲ್ಲಿ ಪದಕಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರಿಂದಾಗಿ, ಸದರಿಯವರೊಂದಿಗೆ ನಡೆಸಲಾದ ದರ ಸಂಧಾನದ ನಂತರ ಅಂತಿಮವಾಗಿ ಪ್ರತಿ ಪದಕಕ್ಕೆ ರೂ.2,850/-ಗಳಂತೆ ಬೆಲೆ ನಿಗದಿಪಡಿಸಿ ಸರಬರಾಜು ಮಾಡಲು ಒಪ್ಪಿದ ಹಿನ್ನೆಲೆಯಲ್ಲಿ, ಹಾಗೂ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಪದಕಗಳ ತುರ್ತು ಅಗತ್ಯವಿದ್ದುದ್ದರಿಂದ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಪ್ರತಿ ಸ್ವರ್ಣಪದಕಕ್ಕೆ ರೂ.2,850/-ಗಳಂತೆ ಒಟ್ಟು 136 ಪದಕಗಳನ್ನು ಖರೀದಿಸಿ ಘಟಿಕೋತ್ಸವದಲ್ಲಿ ಪ್ರದಾನ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ದೂರ ಶಿಕ್ಷಣ ನಿರ್ದೇಶನಾಲಯ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**2024–ಸಿಂ–2.01 (5.12):** Learning Management System (LMS) ಅಳವಡಿಕೆಯ ಖರೀದಿ ಮೊತ್ತ ಮಂಜೂರಾತಿ ಆದೇಶದ ಸ್ಥಿರೀಕರಣ ಹಾಗೂ ಅನುಮೋದನೆ ಕುರಿತು.

**ನಿರ್ಣಯ:** ಇದನ್ನು ವಿಷಯ ಸಂಖ್ಯೆ: 2025–ಸಿಂ–2.28(ಬಿ)ಗೆ ವರ್ಗಾಯಿಸಲಾಯಿತು.

**2024–ಸಿಂ–2.01 (5.13):** ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಪದವಿ ಕೋರ್ಸುಗಳ ಶುಲ್ಕಗಳ ಪರಿಷ್ಕರಣೆ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ವಿಷಯವನ್ನು ಮುಂದೂಡಲಾಯಿತು.

## ಶೈಕ್ಷಣಿಕ ವಿಭಾಗ

**2024–ಸಿಂ–2.01 (5.13.ಎ):** ಕಟೀಲು ಅಶೋಕ್ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ ಈ ಕಾಲೇಜಿನ "ಸ್ನಾತಕೋತ್ತರ ಮನಃಶಾಸ್ತ್ರ" ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸಂಯೋಜಿತ ಕಟೀಲ್ ಅಶೋಕ್‌ಪೈ ಸ್ಮಾರಕ ಕಾಲೇಜು, ಶಿವಮೊಗ್ಗ ಇಲ್ಲಿನ ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ತಜ್ಞರ ಸಮಿತಿ ರಚಿಸುವ ಸಲುವಾಗಿ ಸಲ್ಲಿಸಿದ ಬಾಹ್ಯ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದರಿ ಪಟ್ಟಿಯಿಂದ ಇಬ್ಬರನ್ನು ಆಯ್ಕೆ ಮಾಡಿ ಸಮಿತಿ ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

## ಪ್ರಾಧಿಕಾರ ವಿಭಾಗ

**2024–ಸಿಂ–2.02:** ಸ್ನಾತಕೋತ್ತರ ಭೂಗರ್ಭಶಾಸ್ತ್ರ ಸಂಯುಕ್ತ ಇ.ಎಸ್.ಆರ್.ಎಂ.& ಎಂ.ಆರ್.ಎಸ್.ಎ. (Geo-Informatics) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಭೂಗರ್ಭಶಾಸ್ತ್ರ ಸಂಯುಕ್ತ ಇ.ಎಸ್.ಆರ್.ಎಂ. & ಎಂ.ಆರ್.ಎಸ್.ಎ. (Geo-Informatics) ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–2.03:** ಸ್ನಾತಕ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024–ಸಿಂ–2.04:** ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.



**ಕುಲಸಚಿವರು**

Scanned with OKEN Scanner

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.05:** ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.06:** ಸ್ನಾತಕೋತ್ತರ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.07:** ಸ್ನಾತಕ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.08:** ಸ್ನಾತಕ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.09:** ಸ್ನಾತಕ ಅರ್ಥಶಾಸ್ತ್ರ ಮತ್ತು ಸಹಕಾರ(ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ನಿರ್ಣಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಅರ್ಥಶಾಸ್ತ್ರ ಮತ್ತು ಸಹಕಾರ(ಸಂಯುಕ್ತ) ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು, ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**2024–ಸಿಂ–2.10:** ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2024–ಸಿಂ–2.11:** ಸ್ನಾತಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2024–ಸಿಂ–2.12:** ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕ್ರಮವನ್ನು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ.

**ನಿರ್ಣಯ:** ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಸಲ್ಲಿಸಿರುವ ತಜ್ಞರ ಪಟ್ಟಿಯಲ್ಲಿ ಹಲವಾರು ಲೋಪಗಳಿರುವುದರಿಂದ ವಿಷಯವನ್ನು ಮುಂದೂಡಲಾಯಿತು ಹಾಗೂ ದೋಷಪೂರಿತ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಂಬಂಧಪಟ್ಟವರಿಂದ ಸ್ಪಷ್ಟೀಕರಣ ಪಡೆಯಬೇಕೆಂದು ಸಭೆಯು ನಿರ್ಣಯಿಸಿತು.

**2024–ಸಿಂ–2.12(ಎ):** ದಿನಾಂಕ:02–12–2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ನಿರ್ಣಯ:** ವಿಶ್ವವಿದ್ಯಾಲಯವು ಎಲ್ಲಾ ಸದಸ್ಯರಿಗೆ ಒದಗಿಸಿದ ದಿನಾಂಕ:02–12–2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

## ಹಣಕಾಸು ವಿಭಾಗ

**2024–ಸಿಂ–2.13:** 2023–24ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ದಿನಾಂಕ:18–01–2024ರಂದು ಆನ್‌ಲೈನ್ ಮೂಲಕ ನಡೆದ 2023–24ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**2024–ಸಿಂ–2.13(ಎ):** 2024–25ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ದಿನಾಂಕ:26–02–2024ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುವ ವಿಶ್ವವಿದ್ಯಾಲಯದ 2024–25ನೇ ಆರ್ಥಿಕ ವರ್ಷದ ರೂ.185.5 ಲಕ್ಷಗಳ ಕೊರತೆಯ ಆಯ–ವ್ಯಯ ಅಂದಾಜನ್ನು ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳು ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದರು. ಸದಸ್ಯರಾದ ಶ್ರೀ ಶಶಿಧರ, ಬಿ.ಎನ್.,ರವರು ಮಾತನಾಡಿ, ಅತಿಥಿ ಉಪನ್ಯಾಕರು ಹಾಗೂ ಹೊರಗುತ್ತಿಗೆ ನೌಕರರ ವೇತನವನ್ನು ಪಾವತಿಸುವಂತೆ ವಿಶ್ವವಿದ್ಯಾಲಯ ಸಲ್ಲಿಸಿರುವ ಪ್ರಸ್ತಾವನೆಗೆ ಸರ್ಕಾರದ ಹಣಕಾಸು ಇಲಾಖೆಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ. ಆಂತರಿಕ ಸಂಪನ್ಮೂಲದಿಂದ ಈ ವೆಚ್ಚಗಳನ್ನು ಭರಿಸಲು ಕಷ್ಟವಾಗುತ್ತದೆ. ಆದುದರಿಂದ, ಅತಿಥಿ ಉಪನ್ಯಾಸಕರು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸುವುದು



ಕುಲಸಚಿವರು

ಅನಿವಾರ್ಯವಾಗಿದೆ ಎಂದರು. ಮುಂದುವರೆದು ಮಾತನಾಡಿದ ಅವರು, ವಿಶ್ವವಿದ್ಯಾಲಯದ ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವ ಬಗ್ಗೆ ಹಣಕಾಸು ಅಧಿಕಾರಿಗಳು ಒಂದು ವಿವರವಾದ ವರದಿಯನ್ನು ಸಿದ್ಧಪಡಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ಎಂದರು. ಸದಸ್ಯರಾದ ಡಾ.ಅನಂತ್‌ರವರು ಮಾತನಾಡಿ, ಈ ಹಿಂದೆ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳು ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಇದ್ದಾಗಿನ ಸಂಖ್ಯೆಯ ಅಧ್ಯಾಪಕೇತರ ನೌಕರರೇ ಈಗಲೂ ಕರ್ತವ್ಯ ನಿರ್ವಹಿಸುತ್ತಿದ್ದು, ಕೆಲವು ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿನ ನೌಕರರ ಸಂಖ್ಯೆಯನ್ನು ಕಡಿತಗೊಳಿಸಬೇಕು ಎಂದರು. ಕುಲಸಚಿವರು ಮಾತನಾಡಿ, ಹೊರಗುತ್ತಿಗೆ ಸೇವೆಗಾಗಿ ಹೊಸ ಇ-ಟೆಂಡರ್ ಮಾಡುವಾಗ ಹೊರಗುತ್ತಿಗೆ ನೌಕರರ ಅರ್ಹತೆ ಹಾಗೂ ಸೇವಾ ಪೂರ್ವಾಪರಗಳನ್ನು ಪರಿಶೀಲಿಸಿ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ, ಸರ್ಕಾರವು ವೇತನ ಮತ್ತು ಪಿಂಚಣಿ ಹೊರತುಪಡಿಸಿ ಬೇರೆ ಅಭಿವೃದ್ಧಿ ಅನುದಾನ ಮಂಜೂರು ಮಾಡಿಲ್ಲ. ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಕರ್ನಾಟಕ ವಿಧಾನ ಸಭೆಯಿಂದ ಇಬ್ಬರು ಹಾಗೂ ವಿಧಾನ ಪರಿಷತ್ತಿನಿಂದ ಇಬ್ಬರು ಶಾಸಕರನ್ನು ನಾಮನಿರ್ದೇಶನ ಮಾಡಿರುವುದರಿಂದ, ಸದರಿ ಶಾಸಕರನ್ನು ಒಳಗೊಂಡಂತೆ ಒಂದು ನಿಯೋಗವನ್ನು ಕೊಂಡೊಯ್ದು ಸರ್ಕಾರದಿಂದ ಹೆಚ್ಚಿನ ಅನುದಾನ ಪಡೆಯಲು ಪ್ರಯತ್ನಿಸಬಹುದು ಎಂದರು. ಸದಸ್ಯರಾದ ಡಾ.ಪರಮೇಶ ಮಸಲವಾಡರವರು ಮಾತನಾಡಿ, ಪಿ.ಎಂ–ಉಷಾ ಯೋಜನೆಯಡಿ ರಾಜ್ಯದ ಹಲವು ವಿಶ್ವವಿದ್ಯಾಲಯಗಳಿಗೆ ವಿಶೇಷ ಅನುದಾನ ಮಂಜೂರಾಗಿದೆ. ಆದರೆ, ನಮ್ಮ ವಿಶ್ವವಿದ್ಯಾಲಯದಿಂದ ಪ್ರಸ್ತಾವನೆಯನ್ನು ಸಲ್ಲಿಸದ ಕಾರಣ ಅನುದಾನ ಬಾರದೆ ನಷ್ಟವಾಗಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಅರಣ್ಯಭೂಮಿಯ ಸಮಸ್ಯೆ ಇರುವುದರಿಂದ ಭೂದಾಖಲೆಗಳು ವಿಶ್ವವಿದ್ಯಾಲಯದ ಹೆಸರಿಗೆ ನೋಂದಣಿ ನವೀಕರಣವಾಗಿಲ್ಲವಾದ್ದರಿಂದ ಪ್ರಸ್ತಾವನೆ ಸಲ್ಲಿಸಲು ಆಗಲಿಲ್ಲ ಎಂದರು. ಶ್ರೀ ಶಾಂತಕುಮಾರ್‌ರವರು ಮುಂದುವರೆದು ಮಾತನಾಡಿ, ವಿಶ್ವವಿದ್ಯಾಲಯದ ಕೇಂದ್ರ ಕಛೇರಿ ಆವರಣದಲ್ಲಿ ಸಮಸ್ಯೆ ಇದ್ದಲ್ಲಿ ಸ್ನಾತಕೋತ್ತರ ಕೇಂದ್ರಗಳು ಹಾಗೂ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಪ್ರಸ್ತಾವನೆ ಸಲ್ಲಿಸಲು ಅವಕಾಶ ಇತ್ತು ಎಂದರು. ಶ್ರೀ ಶಶಿಧರ, ಬಿ.ಎನ್., ರವರು ಮಾತನಾಡಿ, ಸಕಾಲದಲ್ಲಿ ಪ್ರಸ್ತಾವನೆ ಸಲ್ಲಿಸಲು ವಿಫಲರಾದವರಿಗೆ ನೋಟೀಸ್ ನೀಡಿ ಸ್ಪಷ್ಟೀಕರಣ ಪಡೆದುಕೊಂಡು, ಇದರಲ್ಲಿ ಅವರ ಬೇಜವಾಬ್ದಾರಿ ಇದ್ದಲ್ಲಿ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ನೌಕರರ ಬೇಜವಾಬ್ದಾರಿಯಿಂದ ವಿಶ್ವವಿದ್ಯಾಲಯಕ್ಕೆ ನಷ್ಟವಾಗುತ್ತದೆ ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ.ಎಸ್.ಆರ್.ನಿರಂಜನರವರು ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಇದಕ್ಕಾಗಿ ಒಂದು ಸಮಿತಿ ರಚಿಸಿ, ಪ್ರಸ್ತಾವನೆ ಸಿದ್ದಪಡಿಸಿ, ಒಂದು ನಿಯೋಗ ತೆರಳಿ ಸಲ್ಲಿಸಬಹುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಹಣಕಾಸು ಅಧಿಕಾರಿಗಳು ಮಂಡಿಸಿದ ವಿಶ್ವವಿದ್ಯಾಲಯದ 2024–25 ನೇ ಸಾಲಿನ ಅಂದಾಜು ಆಯವ್ಯಯವನ್ನು ಸಭೆಯು ಅನುಮೋದಿಸಿತು ಹಾಗೂ ಅನಗತ್ಯ ವೆಚ್ಚ ಕಡಿತಗೊಳಿಸಲು ಮತ್ತು ಸರ್ಕಾರದಿಂದ ವಿಶೇಷ ಅಭಿವೃದ್ಧಿ ಅನುದಾನ ಪಡೆಯಲು ಮತ್ತು ಪಿ.ಎಂ.ಉಷಾ ಯೋಜನೆಯ ಅನುದಾನಕ್ಕಾಗಿ ಮೇಲಿನ ಚರ್ಚೆಯಂತೆ ಕ್ರಮವಹಿಸಬೇಕೆಂದು ನಿರ್ಣಯಿಸಿತು.

**2024–ಸಿಂ–2.13(ಬಿ):** ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಅಡ್–ಹಾಕ್ ಸಮಿತಿಗೆ ಮಂಡಿಸಲು ಅನುಮೋದನೆ ನೀಡುವ ಬಗ್ಗೆ.

**ಕುಲಸಚಿವರು**
**ಕು.ವಿ./ ಜ್ಞಾನಸಹ್ಯಾದ್ರಿ**



Scanned with OKEN Scanner

**ಚರ್ಚೆ:** ಹಣಕಾಸು ಅಧಿಕಾರಿಗಳು ಮಾತನಾಡುತ್ತಾ, ಅಡ್-ಹಾಕ್ ಸಮಿತಿಗೆ ಮಂಡಿಸಬೇಕಾಗಿರುವ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು, ಇದರಲ್ಲಿ ಹಲವಾರು ಕಂಡಿಕೆಗಳನ್ನು ಕೈಬಿಡಲು ಅಗತ್ಯವಿರುವ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸಲಾಗಿದೆ ಎಂದರು. ಸದಸ್ಯರಾದ ಶ್ರೀ ಶಶಿಧರ, ಬಿ.ಎನ್.,ರವರು ಮಾತನಾಡಿ, ಹೆಚ್ಚಿನ ಸಂಖ್ಯೆಯ ಆಡಿಟ್ ಕಂಡಿಕೆಗಳನ್ನು ಕೈಬಿಡಿಸಲು ಪ್ರಯತ್ನಿಸುವಂತೆ ತಿಳಿಸಿದರು. ಮುಂದುವರೆದು ಮಾತನಾಡಿದ ಹಣಕಾಸು ಅಧಿಕಾರಿಗಳು, ಆಡಿಟ್ ಕಂಡಿಕೆಗಳಿಗೆ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದವರು ಸಮರ್ಪಕವಾದ ಮತ್ತು ಸಮರ್ಥನೀಯ ಮಾಹಿತಿ ಹಾಗೂ ದಾಖಲೆಗಳನ್ನು ಸಕಾಲದಲ್ಲಿ ಒದಗಿಸಿದರೆ ಬಹಳಷ್ಟು ಪ್ಯಾರಾಗಳು ಕಡಿಮೆಯಾಗುತ್ತವೆ. ಆದರೆ, ಕೆಲವು ವಿಭಾಗಗಳಿಂದ ಸಕಾರಾತ್ಮಕ ಸ್ಪಂದನೆ ಇಲ್ಲವಾದ್ದರಿಂದ ಪ್ಯಾರಾಗಳ ಸಂಖ್ಯೆ ಸ್ವಲ್ಪ ಜಾಸ್ತಿ ಇದೆ. ಆಡಿಟ್ ಆಕ್ಷೇಪಣಾ ಪ್ಯಾರಾಗಳಿಗೆ/ಕಂಡಿಕೆಗಳಿಗೆ ವಿವಿಧ ವಿಭಾಗಗಳಿಂದ ಸಮರ್ಥನೀಯವಾದ ಮಾಹಿತಿ/ ದಾಖಲೆಗಳನ್ನು ಸಕಾಲದಲ್ಲಿ ಲೆಕ್ಕಪರಿಶೋಧಕರಿಗೆ ಒದಗಿಸಲು ವಿಫಲವಾಗುವ ನೌಕರರ ವಿರುದ್ಧ ಶಿಸುಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದಲ್ಲಿ ಆದೇಶ ಹೊರಡಿಸುವ ಪ್ರಕ್ರಿಯೆ ಇದೆ. ಇದು ಬಂದಲ್ಲಿ ವಿಶ್ವವಿದ್ಯಾಲಯದಲ್ಲಿ ಕೂಡ ಅಳವಡಿಸಿಕೊಳ್ಳಲಾಗುವುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಚರ್ಚೆಯ ನಂತರ ಅಡ್-ಹಾಕ್ ಸಮಿತಿಗೆ ಮಂಡಿಸುವ ಸಲುವಾಗಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.

## ಅಭಿವೃದ್ಧಿ ವಿಭಾಗ

**2024–ಸಿಂ–2.14:** Valyou Products Private Ltd Raminakoppa, Hosalli (P) Shimoga, (ಅಮೃತ್ ನೋನಿ) ಕಂಪನಿ ಇವರೊಂದಿಗೆ ಸ್ನಾತಕೋತ್ತರ ಬಯೋಟೆಕ್ನಾಲಜಿ ವಿಭಾಗ ಕುವೆಂಪು ವಿಶ್ವವಿದ್ಯಾಲಯವು ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಂಶೋಧನಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಹಾಗೂ ವಿಶ್ವವಿದ್ಯಾಲಯಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗುವುದಿಲ್ಲವಾದ್ದರಿಂದ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವು Valyou Products Private Ltd Raminakoppa, Hosalli (P) Shimoga, (ಅಮೃತ್ ನೋನಿ) ಕಂಪನಿ ಇವರೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

## ಎಸ್ಟೇಟ್ ವಿಭಾಗ

**2024–ಸಿಂ–2.15:** ವಿಶ್ವವಿದ್ಯಾಲಯ ಆವರಣದಲ್ಲಿನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಇ-ಟೆಂಡರ್ ಮೂಲಕ ಕ್ರಮಕೈಗೊಂಡಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯ ಆವರಣದಲ್ಲಿನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಸಂಬಂಧ ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಿದ ಸಭೆಯು, ಟೆಂಡರ್‌ದಾರರಾದ ಮೆ:ಎಂ.ಡಿ.ಪಿ. ಟ್ರಾನ್ಸ್‌ಪೋರ್ಟ್, ಗೋಪಾಳ, ಶಿವಮೊಗ್ಗ ಇವರೊಂದಿಗೆ ಮಾಸಿಕ ತೆರಿಗೆಗಳನ್ನು ಹೊರತುಪಡಿಸಿ ರೂ.29,699/- (ಇಪ್ಪತ್ತೊಂಭತ್ತು ಸಾವಿರದ ಆರುನೂರಾ ತೊಂಭತ್ತೊಂಬತ್ತು ರೂಪಾಯಿಗಳು ಮಾತ್ರ)ಗಳ ದರದಲ್ಲಿ ದಿನಾಂಕ:01-02-2024 ರಿಂದ ದಿನಾಂಕ:31-01-2026 ರವರೆಗೆ ಎರಡು ವರ್ಷಗಳ ಅವಧಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.



**ಕುಲಸಚಿವರು**
**ಕು.ವಿ./ ಜ್ಞಾನಸಹ್ಯಾದ್ರಿ**

Scanned with OKEN Scanner

## ಶೈಕ್ಷಣಿಕ ವಿಭಾಗ

**2024–ಸಿಂ–2.16:** Design Development Implementation & Maintainance of Fraternity Platform Infrastructure (FPI) E-Tender ಮುಕ್ತಾಯಗೊಳಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಉಪಯುಕ್ತವಲ್ಲದ ಮತ್ತು ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗುವ Design Development Implementation & Maintainance of Fraternity Platform Infrastructure (FPI) E-Tender ನ್ನು ಮುಕ್ತಾಯಗೊಳಿಸಲು ಸಭೆಯು ಅನುಮೋದನೆ ನೀಡಿತು.

## ಪರೀಕ್ಷಾ ವಿಭಾಗ

**2024–ಸಿಂ–2.17:** ಪರೀಕ್ಷಾ ವಿಭಾಗದಲ್ಲಿ ಇರುವಂತಹ ನಿಗದಿತ ಅವಧಿ ಮುಗಿದ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿ ಮಾಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಇರುವ ನಿಗದಿತ ಅವಧಿ ಮುಕ್ತಾಯಗೊಂಡಿರುವ ಮೌಲ್ಯಮಾಪನಗೊಂಡ ಹಳೆಯ ಉತ್ತರ ಪತ್ರಿಕೆಗಳು ಹಾಗೂ ಇತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿ ಮಾಡುವ ಕುರಿತು ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

**2024–ಸಿಂ–2.18:** ಅಂಕಪಟ್ಟಿ/ಪಿ.ಪಿ.ಸಿ./ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಕುರಿತು.

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಅಂಕಪಟ್ಟಿ/ಪಿ.ಪಿ.ಸಿ./ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಸರಬರಾಜು ಮಾಡಲು ಕರೆಯಲಾಗಿದ್ದ ಇ-ಟೆಂಡರ್‌ನ್ನು ರದ್ದುಪಡಿಸಿರುವುದಾಗಿ ಕುಲಸಚಿವ (ಮೌಲ್ಯಮಾಪನ) ರವರು ಸಭೆಗೆ ತಿಳಿಸಿದ್ದರಿಂದ ವಿಷಯವನ್ನು ಕೈಬಿಡಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2024–ಸಿಂ–2.19:** ಡಾ. ಸುಷ್ಮಾ ಆರ್. ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಎಜ್ಯುಕೇಷನ್, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಹಿತ ವರ್ಗಾವಣೆ ಮಾಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ, ಹೆಚ್ಚಿನ ಅಧ್ಯಾಪಕರ ಅಗತ್ಯ ಇಲ್ಲದ ಕಾರಣದಿಂದಾಗಿ ಡಾ. ಸುಷ್ಮಾ. ಆರ್., ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಎಜುಕೇಷನ್, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ-ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ಸಹಿತ ವರ್ಗಾವಣೆ ಮಾಡುವ ಸಲುವಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು **ಅನುಮೋದಿಸದಿರಲು** ಸಭೆಯು ನಿರ್ಣಯಿಸಿತು.

**2024–ಸಿಂ–2.20:** ಶ್ರೀ ಶಂಕರಪ್ಪ ಬಿ, ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಇವರ ಇಲಾಖಾ ವಿಚಾರಣೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಶ್ರೀ ಶಂಕರಪ್ಪ ಬಿ, ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಇವರಿಗೆ ವಾಗ್ದಂಡನೆ ವಿಧಿಸಿ, ಅವರ ಸೇವಾ ಸೌಲಭ್ಯಗಳಿಗೆ ಬಾಧಕವಾಗದಂತೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸಭೆಯು ನಿರ್ಣಯಿಸಿತು.

**2024–ಸಿಂ–2.21:** ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಿಂದಿರುಗಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿನ ಹೆಚ್ಚಿನ ಸಿಬ್ಬಂದಿಗಳು ನಿವೃತ್ತರಾಗಿದ್ದು, ಸರ್ಕಾರಿ ಆದೇಶದ ಪ್ರಕಾರ ಸಿಬ್ಬಂದಿಗಳು ನಿವೃತ್ತಿಯಾದ ಕೂಡಲೇ ಹುದ್ದೆಗಳು ಖಾಯಂ ಆಗಿ ರದ್ದಾಗುವುದರಿಂದ, ಸದರಿ ಕೇಂದ್ರದ ನಿರ್ವಹಣೆಗೆ ಕುಶಲ ತಾಂತ್ರಿಕ ಸಿಬ್ಬಂದಿಗಳ ಕೊರತೆಯಾಗುತ್ತದೆ. ಅಲ್ಲದೇ, ಸರ್ಕಾರದಿಂದ ಕೆಳದಿ ಕೇಂದ್ರದ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲವಾದ ಕಾರಣದಿಂದ ಮತ್ತು ವಿಶ್ವವಿದ್ಯಾಲಯದ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಆರ್ಥಿಕ ಸ್ಥಿತಿ ಕೂಡ ಉತ್ತಮವಾಗಿಲ್ಲದಿರುವುದರಿಂದ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರವನ್ನು ಮಾತೃ ಇಲಾಖೆಯಾದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಿಂದಿರುಗಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2024-ಸಿ-2.22:** ಯು.ಯು.ಸಿ.ಎಂ.ಎಸ್ ಪೋರ್ಟಲ್ ಅಡ್ಮಿನ್ ಇವರನ್ನು ಮುಂದುವರೆಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಯು.ಯು.ಸಿ.ಎಂ.ಎಸ್ ಪೋರ್ಟಲ್ ಅಡ್ಮಿನ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಮಿ.ಅನಿಲ. ಎಸ್.ಕೆ. ಇವರು ಯು.ಯು.ಸಿ.ಎಂ.ಎಸ್ ನಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಬಿ.ಇಡಿ ಪದವಿಗಳ ಶೈಕ್ಷಣಿಕ, ಪರೀಕ್ಷೆ, ಪ್ರವೇಶಾತಿ ಹಾಗೂ ಫಲಿತಾಂಶ ಸಂಬಂಧಪಟ್ಟಂತೆ ಕಾರ್ಯಗಳನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ, ಸದರಿಯವರ ಸೇವೆಯು ಅಗತ್ಯವಾಗಿದೆ ಎಂದು ಪರಿಗಣಿಸಿದ ಸಭೆಯು, ಇವರನ್ನು ಪೋರ್ಟಲ್ ಅಡ್ಮಿನ್ ಹುದ್ದೆಯಲ್ಲಿ ಮಾಹೆಯಾನ ರೂ.22,000/-(ರೂಪಾಯಿ ಇಪ್ಪತ್ತೆರಡು ಸಾವಿರ ಮಾತ್ರ)ಗಳ ಸಂಭಾವನೆಯೊಂದಿಗೆ ಮುಂದುವರೆಸಲು ಅನುಮೋದನೆ ನೀಡಲು ನಿರ್ಣಯಿಸಿತು.

**2024-ಸಿ-2.23:** ಎಂ.ಬಿ.ಎ. ಅಧ್ಯಯನ ವಿಭಾಗಕ್ಕೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ (ಎಂ.ಬಿ.ಎ.) ವಿಭಾಗಾಧ್ಯಕ್ಷರ ಅವಧಿಯು ದಿನಾಂಕ:27-01-2024 ರಂದು ಮುಕ್ತಾಯಗೊಂಡಿದ್ದ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಡಾ.ಮಂಜುನಾಥ.ಕೆ.ಆರ್., ಸಹಪ್ರಾಧ್ಯಾಪಕರು ಇವರನ್ನು ದಿನಾಂಕ:28-01-2024ರಿಂದ ಅನ್ವಯವಾಗುವಂತೆ 2 ವರ್ಷಗಳ ಅವಧಿಗೆ ವಿಭಾಗಾಧ್ಯಕ್ಷರನ್ನಾಗಿ ನೇಮಕಾತಿ ಮಾಡಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿ-2.24(ಎ):** ಎಂ.ಸಿ.ಎ./ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗಕ್ಕೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಎಂ.ಸಿ.ಎ./ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗದ ಅಧ್ಯಕ್ಷರ ಅವಧಿಯು ಮುಕ್ತಾಯಗೊಂಡಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಡಾ.ಸಿ.ಜೆ.ಪ್ರಭಾಕರ, ಪ್ರಾಧ್ಯಾಪಕರು ಇವರನ್ನು ದಿನಾಂಕ:22-02-2024ರಿಂದ ಅನ್ವಯವಾಗುವಂತೆ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗಾಧ್ಯಕ್ಷರನ್ನಾಗಿ ನೇಮಕಾತಿ ಮಾಡಿ ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿ-2.24(ಬಿ):** ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಕ ಮಾಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿಯು ಏಪ್ರಿಲ್/ಮೇ-2024ರ ಮಾಹೆಯಲ್ಲಿ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಪ್ರಕರಣ 34(7)ರನ್ವಯ ವಿಭಾಗಾಧ್ಯರನ್ನು ಸರದಿ ಹಾಗೂ ಜೇಷ್ಠತೆಯ ಆಧಾರದಲ್ಲಿ ನೇಮಕ ಮಾಡಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ಸಭೆಯು ನಿರ್ಣಯಿಸಿತು.

1) ಜೀವರಸಾಯನಶಾಸ್ತ್ರ
2) ಆಹಾರತಂತ್ರಜ್ಞಾನ
3) ಹಿಂದಿ

**2024-ಸಿ-2.24(ಸಿ):** ಸ್ನಾತಕ ವಿಭಾಗಗಳಿಗೆ 2022-23ನೇ ಸಾಲಿನ ಶೈಕ್ಷಣಿಕ ಅವಧಿಗೆ ಅತಿಥಿ ಉಪನ್ಯಾಸಕರ ಹುಂಡಿಯನ್ನು



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

ಪಾವತಿಸಲು ಅನುಮತಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರ ಅನುಮತಿ ಪತ್ರದಲ್ಲಿ "2022-23ನೇ ಶೈಕ್ಷಣಿಕ ಸಾಲಿನ ಸೆಮಿಸ್ಟರ್ ಅಂತ್ಯದವರೆಗೆ ಅಥವಾ ಗರಿಷ್ಟ 10 ತಿಂಗಳವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾತ್ರ" ಎಂದು ಪರಿಷ್ಕರಿಸಿರುವುದನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2024-ಸಿಂ-2.24:** 2023-24ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸ್/ ವಿಷಯಗಳಿಗೆ ನವೀನ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದ ಪ್ರಕಾರ ವಿಶ್ವವಿದ್ಯಾಲಯದ ಸಂಯೋಜನೆ ಪಡೆದಿರುವ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 10 ಸರ್ಕಾರಿ ಕಾಲೇಜುಗಳು ಕೋರಿಕೆಯ ಮೇರೆಗೆ ಸರ್ಕಾರ ಮಂಜೂರು ಮಾಡಿದ್ದ ಹೊಸ ಕೋರ್ಸ್/ವಿಷಯಗಳಿಗೆ 2023-24ನೇ ಸಾಲಿನಲ್ಲಿ ನಿಯಮಾನುಸಾರ ನವೀನ ಸಂಯೋಜನೆ ನೀಡಿ, ಸಂಯೋಜನಾ ವರದಿಗಳನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಸರ್ಕಾರಕ್ಕೆ ಸಲ್ಲಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-2.25:** ಚಿಕ್ಕಮಗಳೂರು ಜಿಲ್ಲೆಯ 03 ಕಾಲೇಜುಗಳು ವಿಶ್ವವಿದ್ಯಾಲಯದ ಸಂಯೋಜನೆಯಿಂದ ಶಾಶ್ವತವಾಗಿ ರದ್ದುಪಡಿಸುವಂತೆ ಕೋರಿರುವ ಬಗ್ಗೆ.

**ನಿರ್ಣಯ:** ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿದ ಸಭೆಯು, ಸದರಿ ಕಾಲೇಜುಗಳಲ್ಲಿ ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯ, ರಿಪೀಟರ್ಸ್ ವಿದ್ಯಾರ್ಥಿಗಳ ಸ್ಥಿತಿಗತಿ, ಹಳೆಯ ವಿದ್ಯಾರ್ಥಿಗಳ ಪ್ರವೇಶ ಹಾಗೂ ಪರೀಕ್ಷೆಯ ದಾಖಲೆಗಳು, ಅಂಕಪಟ್ಟಿಗಳು, ವಿದ್ಯಾರ್ಥಿಗಳನ್ನು ಬೇರೆ ಕಾಲೇಜುಗಳಿಗೆ ವರ್ಗಾಯಿಸುವುದಿದ್ದಲ್ಲಿ ಇದಕ್ಕೆ ವಿದ್ಯಾರ್ಥಿಗಳು ಸಲ್ಲಿಸಿರುವ ಒಪ್ಪಿಗೆ ಪತ್ರ ಮುಂತಾದ ಸಮಗ್ರ ಮಾಹಿತಿಗಳನ್ನು ಪಡೆದುಕೊಂಡ ನಂತರ ಶ್ರೀ ಕಲ್ಲೇಶ್ವರ ಪ್ರಥಮ ದರ್ಜೆ ಕಾಲೇಜು, ಸಿಂಘಟಗೆರೆ, ಬಾಳೆಹೊನ್ನೂರು ಎಜುಕೇಷನ್ ಸೊಸೈಟಿ ಪ್ರಥಮ ದರ್ಜೆ ಕಾಲೇಜು, ಬಾಳೆಹೊನ್ನೂರು ಹಾಗೂ ಎಸ್.ಜೆ.ಎಂ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತರೀಕೆರೆ-ಇವುಗಳನ್ನು ಮುಚ್ಚಲು ಅನುಮತಿ ನೀಡುವ ಬಗ್ಗೆ ಕ್ರಮವಹಿಸಬೇಕೆಂದು ಸಭೆಯು ನಿರ್ಣಯಿಸಿತು.

**2024-ಸಿಂ-2.26:** ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ನಡಾವಳಿ ಮತ್ತು ಸಂಯೋಜನೆ ಶುಲ್ಕಗಳ ಪರಿಷ್ಕರಣ ಪಟ್ಟಿಯ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ: 30-12-2023ರಂದು ನಡೆದ ಕಾಲೇಜು ಅಭಿವೃದ್ಧಿ ಪರಿಷತ್ತಿನ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು, 2024-25ನೇ ಸಾಲಿನ ಸಂಯೋಜನಾ ಶುಲ್ಕಗಳನ್ನು ಕೆಲವು ಅಂಶಗಳ ಸೇರ್ಪಡೆಯೊಂದಿಗೆ ಶೇ.10ರಷ್ಟು ಹೆಚ್ಚಿಸಿ ಪರಿಷ್ಕರಿಸಲು ನಿರ್ಣಯಿಸಿತು.

**2024-ಸಿಂ-2.27:** ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರ ಮತ್ತು ಪ್ರಶಿಕ್ಷಕರುಗಳ ನೇಮಕಾತಿ ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕ ಪಾವತಿ ಕುರಿತು.

**ಚರ್ಚೆ:** ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಡಾ.ನಾಗರಾಜ ರವರು ಮಾತನಾಡಿ, ವಿಶ್ವವಿದ್ಯಾಲಯವು ಬಿ.ಇಡಿ., ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಅಧ್ಯಾಪಕರ ನೇಮಕಾತಿ ಮತ್ತು ನವೀಕರಣ ಅನುಮೋದನೆ ಮಾಡಿಕೊಡಲು ವಿಶ್ವವಿದ್ಯಾಲಯವು ನಿರ್ವಹಿಸುವ ಕಾರ್ಯಕ್ಕೆ ಈ ಹಿಂದೆ ಪ್ರಾಧಿಕಾರಗಳ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಸೇವಾ ಶುಲ್ಕವನ್ನು ನಿಗದಿಪಡಿಸಲಾಗಿದೆ. ಆದರೆ, ಇತ್ತೀಚೆಗೆ ಕೆಲವು ಶಿಕ್ಷಣ ಕಾಲೇಜುಗಳ ಪ್ರಾಂಶುಪಾಲರು ನವೀಕರಣ ಶುಲ್ಕ ಪಡೆಯಬಾರದೆಂದು ಮನವಿ ಸಲ್ಲಿಸಿದ್ದಾರೆ. ಖಾಯಂ ಅಧ್ಯಾಪಕರಿಗೆ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಈ ಶುಲ್ಕ ವಿಧಿಸುತ್ತಿಲ್ಲ. ನವೀಕರಣದ ಸೇವಾ ಶುಲ್ಕದಿಂದ ವಿನಾಯಿತಿ ನೀಡಿದಲ್ಲಿ ವಿಶ್ವವಿದ್ಯಾಲಯಕ್ಕೆ ಬರುವ ಆಂತರಿಕ ಸಂಪನ್ಮೂಲದ ಕೊರತೆ ಉಂಟಾಗುತ್ತದೆ ಎಂದರು. ಸದಸ್ಯರಾದ ಡಾ.ಪರಮೇಶ ಮಸಲವಾಡರವರು ಮಾತನಾಡಿ, ಮೊದಲ ಬಾರಿಗೆ ಅಧ್ಯಾಪಕರ ನೇಮಕಾತಿ ಅನುಮೋದನೆಗೆ ಶುಲ್ಕ ಪಡೆಯಬಹುದು. ಆದರೆ, ಪ್ರತಿ ವರ್ಷ ನವೀಕರಣ ಶುಲ್ಕ ಪಾವತಿಸುವುದು ಕಾಲೇಜುಗಳಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ ಎಂದರು. ಸದಸ್ಯರಾದ ಶ್ರೀ ಶಶಿಧರ, ಬಿ.ಎನ್., ರವರು ಮಾತನಾಡಿ, ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿ ಶುಲ್ಕ ಪಡೆಯುತ್ತಿದ್ದಾರೆ ಎಂದು ಪರಿಶೀಲಿಸಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ಬಿ.ಇಡಿ., ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಅಧ್ಯಾಪಕರ ನೇಮಕಾತಿ ಮತ್ತು ನವೀಕರಣ ಅನುಮೋದನೆ ಮಾಡಿಕೊಡಲು ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಯಾವ ರೀತಿ ಶುಲ್ಕ ಪಡೆಯುತ್ತಿದ್ದಾರೆ ಎಂಬ ಮಾಹಿತಿ ಪಡೆದು, ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಮುಂದಿನ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

## ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ

**2024–ಸಿಂ–2.28:** SRS First Grade College, Tumkur ಸಂಸ್ಥೆಗೆ ನೀಡಿರುವ ಸಂಯೋಜನೆ ಕುರಿತು. ಸಮಿತಿ ನೀಡಿರುವ ವರದಿ ಹಾಗೂ ಕುಲಸಚಿವರು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಇವರು ನೀಡಿರುವ ಪತ್ರಗಳ ಮೇಲೆ ಸದರಿ ಸಂಸ್ಥೆಗೆ ನೀಡಿರುವ ಕಲಿಕಾರ್ಥಿ ಸೇವಾ ಕೇಂದ್ರದ ಮುಂದುವರಿಕೆ ಕುರಿತು ನಿರ್ಣಯಕ್ಕಾಗಿ.

**ನಿರ್ಣಯ:** ಚರ್ಚೆಯ ನಂತರ ತುಮಕೂರಿನ ಎಸ್.ಆರ್.ಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ 2019–20ನೇ ಸಾಲಿನಲ್ಲಿ ದೂರಶಿಕ್ಷಣದ ಓ.ಡಿ.ಎಲ್., ಅಡಿಯಲ್ಲಿ ಪ್ರವೇಶ ಪಡೆದಿರುವ ರಿಪೀಟರ್ಸ್ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ, ಅವರು ಪದವಿ ಪೂರೈಸಿಕೊಳ್ಳಲು ಅನುವಾಗುವಂತೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೆಂದು ನಿರ್ಣಯಿಸಲಾಯಿತು.

**2024–ಸಿಂ–2.28(ಎ):** ಜ್ಞಾನಧಾರ ಪ್ರಥಮ ದರ್ಜೆ ಕಾಲೇಜು, ಹುಣಸೂರು ಕೇಂದ್ರದಿಂದ 2019–20ನೇ ಶೈಕ್ಷಣಿಕ ಸಾಲಿಗೆ ಅರ್ಜಿಸಲ್ಲಿಸಿದ 337 ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪ್ರಸ್ತುತ ವರ್ಷದಲ್ಲಿ 2019–20ನೇ ಸಾಲಿನ ಪ್ರಥಮ ವರ್ಷದ ಪ್ರವೇಶಾತಿಗೆ ಪರಿಗಣಿಸಿ ಪ್ರವೇಶಾತಿ ಮಾಡಿಕೊಳ್ಳುವ ಕುರಿತು ನಿರ್ಣಯಕ್ಕಾಗಿ.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಅಧಿಕೃತ ಕಲಿಕಾರ್ಥಿ ಸೇವಾ ಕೇಂದ್ರವಾದ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು ಜಿಲ್ಲೆ ಇವರು 2019–20ನೇ ಸಾಲಿನಲ್ಲಿ ಪ್ರವೇಶ ಪಡೆದಿದ್ದ ಸುಮಾರು 337 ವಿದ್ಯಾರ್ಥಿಗಳ ಶುಲ್ಕ ಪಾವತಿಸಿ ಪ್ರವೇಶಾನುಮೋದನೆ ಪಡೆದಿರಲಿಲ್ಲ. ಸದರಿ ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಈಗ ಪ್ರವೇಶಾತಿಗೆ ಪರಿಗಣಿಸುವಂತೆ ಕೋರಿದ್ದಾರೆ. ಅಲ್ಲದೇ, ಸದರಿ ಕಲಿಕಾರ್ಥಿ ಕೇಂದ್ರದಿಂದ ಹಳೆಯ ಶುಲ್ಕ ರೂ.40,58,173/–(ರೂಪಾಯಿ ನಲವತ್ತು ಲಕ್ಷದ ಐವತ್ತೆಂಟು ಸಾವಿರದ ಒಂದು ನೂರ ಎಪ್ಪತ್ಮೂರು ಮಾತ್ರ)ಗಳು ವಿಶ್ವವಿದ್ಯಾಲಯಕ್ಕೆ ಬಾಕಿ ಬರಬೇಕಿದೆ. ಈ ಹಿನ್ನೆಲೆಯಲ್ಲಿ 2019–20ನೇ ಸಾಲಿನ ಆವೃತ್ತಿ–1ರ 337 ವಿದ್ಯಾರ್ಥಿಗಳನ್ನು ಪ್ರಥಮ ವರ್ಷದ ಪ್ರವೇಶಾತಿಗೆ ಪರಿಗಣಿಸುವ ಕುರಿತು ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಜ್ಞಾನಧಾರ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು ಜಿಲ್ಲೆ ಇಲ್ಲಿನ ಕಲಿಕಾರ್ಥಿ ಸೇವಾ ಕೇಂದ್ರ 2019–20ನೇ ಸಾಲಿನಲ್ಲಿ ಪ್ರವೇಶ ಪಡೆದಿದ್ದ ಸುಮಾರು 337 ವಿದ್ಯಾರ್ಥಿಗಳ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಿಲ್ಲವಾದ್ದರಿಂದ ಹಾಗೂ ಕರ್ನಾಟಕ ಸರ್ಕಾರವು ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ದೂರಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ಅವಕಾಶವನ್ನು ಹಿಂಪಡೆದಿರುವುದರಿಂದ 2019–20ನೇ ಸಾಲಿನ ಆವೃತ್ತಿ–1ರ 337 ವಿದ್ಯಾರ್ಥಿಗಳನ್ನು ಪ್ರಥಮ ವರ್ಷದ ಪ್ರವೇಶಾತಿಗೆ ಪರಿಗಣಿಸಲು ಸಾಧ್ಯವಿಲ್ಲ ಎಂದು ಸಭೆಯು ನಿರ್ಣಯಿಸಿತು.

**2024–ಸಿಂ–2.28(ಬಿ):** Learning Management System (LMS) ಅಳವಡಿಕೆಯ ಸಂಬಂಧ Pheme Software pvt Ltd. Bangalore ಸಂಸ್ಥೆಯೊಂದಿಗೆ ಒಡಂಬಡಿಕೆಯ (MOA) ಕುರಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**ಚರ್ಚೆ:** ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಆರ್. ಹಿರೇಮಣಿನಾಯ್ಕ ರವರು ಮಾತನಾಡಿ, ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಕೋರ್ಸ್‌ಗಳಿಗಾಗಿ ಯು.ಜಿ.ಸಿ.ಯ ನಿರ್ದೇಶನದ ಮೇರೆಗೆ Learning Management System (LMS) ಅಳವಡಿಕೆಯ ಸಲುವಾಗಿ ಇ-ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ಇದರಲ್ಲಿ ಅರ್ಹಗೊಂಡ Pheme Software pvt Ltd. Bangalore ಸಂಸ್ಥೆಯೊಂದಿಗೆ ಒಡಂಬಡಿಕೆ (MOA) ಮಾಡಿಕೊಳ್ಳಲು ದಿನಾಂಕ:16-06-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ನಂತರ ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಬಿಡ್‌ನ ಒಟ್ಟು ಮೊತ್ತ ರೂ.1,35,00,000/- (ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಸದರಿ ಸಂಸ್ಥೆಗೆ ಜಿ.ಎಸ್.ಟಿ. ಯೊಂದಿಗೆ ಎರಡು ಕಂತುಗಳಲ್ಲಿ ಪಾವತಿಸಲು ಹಾಗೂ ಮೊದಲ ಕಂತಿನ ಮೊಬಲಗನ್ನು ಪಾವತಿಸಲು ವಿಶ್ವವಿದ್ಯಾಲಯ ಹೊರಡಿಸಿರುವ ಆದೇಶವನ್ನು ಅನುಮೋದಿಸಿ ಸ್ಥಿರೀಕರಿದೆ. ಆದರೆ ಸದರಿ ಸಭೆಯ ನಡಾವಳಿಗಳು ಅನುಮೋದನೆಯಾಗಿರುವುದಿಲ್ಲ.

ನಂತರದಲ್ಲಿ, ದಿನಾಂಕ: 22-09-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿ, LMS Software Installationಗೆ ರೂ.25,00,000/- (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಎಲ್-1 ಬಿಡ್‌ದಾರರಾಗಿ ಆಯ್ಕೆಯಾಗಿರುವ Pheme Software Pvt. Ltd., Bangalore ಸಂಸ್ಥೆಗೆ ಪಾವತಿಸಲು ಮತ್ತು ಉಳಿದ ವೆಚ್ಚಗಳನ್ನು ಹಂತ ಹಂತವಾಗಿ ಅಗತ್ಯಕ್ಕೆ ಅನುಗುಣವಾಗಿ ಪಾವತಿಸಬಹುದು ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಶೇ.70ರಷ್ಟನ್ನು ವಿಶ್ವವಿದ್ಯಾಲಯ ಉಳಿಸಿಕೊಂಡು ಉಳಿದ ಶೇ.30ರಷ್ಟು ಮೊಬಗಲನ್ನು ಸದರಿ ಸಂಸ್ಥೆಗೆ ಪಾವತಿಸಲು ನಿರ್ಣಯಿಸಲಾಗಿತ್ತು. ಹಾಗೂ Pheme Software Pvt. Ltd., Bangalore ಸಂಸ್ಥೆಗೆ LMS Software Installationಗಾಗಿ ರೂ.1,35,00,000/-(ರೂಪಾಯಿ ಒಂದು ಕೋಟಿ ಮೂವತ್ತೈದು ಲಕ್ಷ ಮಾತ್ರ)ಗಳನ್ನು ಪಾವತಿಸುವಂತೆ ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023-ಸಿಂ-5.12ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಹಿಂಪಡೆಯಲಾಯಿತು ಮತ್ತು ಈ ಹಿಂದೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸಿ, ಹೊಸ ಒಪ್ಪಂದ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತ್ತು. ಈ ನಿರ್ಣಯದ ಪ್ರಕಾರ ಪರಿಷ್ಕೃತ ಒಪ್ಪಂದ ಮಾಡಿಕೊಳ್ಳುವಂತೆ Pheme Software Pvt. Ltd., Bangalore ಸಂಸ್ಥೆಗೆ ಲಿಖಿತರೂಪದಲ್ಲಿ ತಿಳಿಸಿದ್ದಾಗ್ಯೂ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಇತ್ತೀಚೆಗೆ ದಿನಾಂಕ: 20-02-2024ರಂದು ಅವರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು, ಈ ಹಿಂದಿನ ಒಪ್ಪಂದದ ಪ್ರಕಾರ ರೂ.1,35,00,000/-(ರೂಪಾಯಿ ಒಂದು ಕೋಟಿ ಮೂವತ್ತೈದು ಲಕ್ಷ ಮಾತ್ರ)ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದು, ಈಗಾಗಲೇ ಈ ಸಂಸ್ಥೆಯ ಮೂಲಕ 1311 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ತುರ್ತಾಗಿ ಶೈಕ್ಷಣಿಕ ಚಟುವಟಿಕೆಗಳನ್ನು LMS ಮೂಲಕ ಆರಂಭಿಸಬೇಕಾಗಿರುವ ಹಿನ್ನೆಲೆಯಲ್ಲಿ ಸಭೆಯ ನಿರ್ಣಯ ಕೋರಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಇದರ ಕುರಿತಾಗಿ ಈ ಹಿಂದಿನ ಕೆಲವು ಸಿಂಡಿಕೇಟ್ ಸಭೆಗಳಲ್ಲಿ ನಿರ್ಣಯವಾಗಿದ್ದರೂ ಕೂಡ LMS ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ. ಆದುದರಿಂದ ದರ ಸಂಧಾನ ಸೇರಿದಂತೆ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲು ಒಬ್ಬರು ಸಿಂಡಿಕೇಟ್ ಸದಸ್ಯರು, ಕಾನೂನು ಸಲಹೆಗಾರರು, ತಾಂತ್ರಿಕ ಸಲಹೆಗಾರರು, ಕುಲಸಚಿವರು (ಮೌಲ್ಯಮಾಪನ) ಸೇರಿದಂತೆ ಒಂದು ಸಮಿತಿಯನ್ನು ರಚಿಸುವಂತೆ ಹಾಗೂ ಸಮಿತಿಯು ಎಲ್ಲಾ ಆಯಾಮಗಳಲ್ಲಿ ಪರಿಶೀಲಿಸಿ ವರದಿ ನೀಡಬೇಕು. ಸದರಿ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2024-ಸಿಂ-2.29:** <u>ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು</u>

ಡಾ. ಚಂದ್ರಶೇಖರ್ ಕೆ.

ಡಾ. ಸಣ್ಣಹನುಮಪ್ಪ ಜಿ.

ಡಾ. ಅನಂತ ಎಸ್.

ಡಾ. ಪರಮೇಶ್ವರ ಮಸಲವಾಡ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

**2024–ಸಿಂ–2.29(ಎ): ಡಾ. ಚಂದ್ರಶೇಖರ್ ಕೆ.**

1) 2001ರಲ್ಲಿ ಪ್ರಸಾರಾಂಗದಿಂದ ಪ್ರಕಟಿತವಾಗಿರುವ ಕಿರುಹೊತ್ತಿಗೆಗಳು, ಹಲವಾರು ವರ್ಷಗಳಿಂದ ಲಭ್ಯವಿರುವುದಿಲ್ಲ ಹಾಗೂ ಬೇಡಿಕೆಗಳಿದ್ದರೂ ಮರು ಮುದ್ರಣಗೊಂಡಿರುವುದಿಲ್ಲದಕ್ಕೆ ಕಾರಣಗಳನ್ನು ತಿಳಿಸಿ ಪುಸ್ತಕಗಳ ಪ್ರಕಟಣೆಗಾಗಿ ಮಾಡಿರುವ ಒಟ್ಟು ವೆಚ್ಚ ಹಾಗೂ ಇದರಿಂದ ಗಳಿಸಿರುವ ಆದಾಯದ ಬಗ್ಗೆ ಹಾಗೂ ಆಡಿಟ್ ವರದಿ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು.

   ಪ್ರಸಾರಾಂಗವು ಒದಗಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು.

2) ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವವರ ಎಲ್ಲಾ ಬೋಧಕರ ಹೆಸರು, ಹುದ್ದೆ, ಮೀಸಲಾತಿ ವರ್ಗಗಳ ಮಾಹಿತಿಗಳು ಹಾಗೂ ಖಾಯಂಗೊಂಡಿರುವ, ಹಂಗಾಮಿಯಾಗಿರುವ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಎಲ್ಲಾ ಬೋಧಕೇತರರ ಹೆಸರುಗಳು, ಹುದ್ದೆ, ಮೀಸಲಾತಿ ವರ್ಗಗಳ ವಿವರಗಳನ್ನು ನೀಡುವಂತೆ ಕೇಳಿದರು.

   ಮಾನವ ಸಂಪನ್ಮೂಲ ನಿರ್ವಹಣಾ ವಿಭಾಗ ನೀಡಿದ ಲಿಖಿತ ವಿವರಗಳನ್ನು ಸದಸ್ಯರಿಗೆ ಒದಗಿಸಲಾಯಿತು.

3) ಬೋಧಕರ ಖಾಲಿ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ಮತ್ತು ಬೋಧಕೇತರರ ಖಾಲಿ ಹುದ್ದೆಗಳಿಗೆ ಹೊರಗುತ್ತಿಗೆಯ ನೌಕರರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದಿಂದ ಅನುಮೋದನೆ ದೊರಕಿರುವ ಆದೇಶಗಳನ್ನು ದಾಖಲೆ ಸಹಿತ ಮಾಹಿತಿ ನೀಡುವಂತೆ ಕೋರಿದರು.

   ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳಿಗೆ ವಿಭಾಗಗಳ ಕಾರ್ಯಭಾರಕ್ಕೆ ಅನುಗುಣವಾಗಿ ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರ ಸಂಭಾವನೆ ಹಾಗೂ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ವೇತನವನ್ನು ಒದಗಿಸುವಂತೆ ಸರ್ಕಾರಕ್ಕೆ ಬರೆದ ಪತ್ರಗಳ ಪ್ರತಿಯನ್ನು ಸದಸ್ಯರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕುಲಸಚಿವರು ದಿನಾಂಕ:26–02–2024 ರಂದು ನಡೆದ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಸರ್ಕಾರದ ಹಣಕಾಸು ಇಲಾಖೆಯ ಪ್ರತಿನಿಧಿಗಳು ಈ ಅನುದಾನ ನೀಡುವುದು ಕಷ್ಟಸಾಧ್ಯ ಎಂದು ತಿಳಿಸಿದ್ದಾರೆ ಎಂಬುದನ್ನು ಸದಸ್ಯರ ಗಮನಕ್ಕೆ ತಂದರು.

4) ಬೋಧಕೇತರ ನೌಕರರ ಬಡ್ತಿಗಳಿಗೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪಿನ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ 15.05.2019ರಲ್ಲಿ ಆದೇಶವನ್ನು ಹೊರಡಿಸಿ 5 ವರ್ಷಗಳಾದರೂ ಕೂಡ ನೌಕರರಿಗೆ ಬಡ್ತಿಯನ್ನು ನೀಡದಿರುವ ಬಗ್ಗೆ ವಿವರ ಕೇಳಿದರು.

   ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿ ಪರಿಷ್ಕರಣೆ ಸಮಿತಿಯ ಶಿಫಾರಸ್ಸಿನ ಮೇರೆಗೆ ಶೀಘ್ರದಲ್ಲಿಯೇ ಅರ್ಹ ನೌಕರರಿಗೆ ಜೇಷ್ಠತೆ ಹಾಗೂ ರೋಸ್ಟರ್ ಪ್ರಕಾರ ಮುಂಬಡ್ತಿಗಳನ್ನು ನೀಡಲಾಗುವುದು ಎಂದು ಸದಸ್ಯರಿಗೆ ತಿಳಿಸಲಾಯಿತು.

**2024–ಸಿಂ–2.29(ಬಿ): ಡಾ. ಸಣ್ಣಹನುಮಪ್ಪ ಜಿ.**

1) 2010 ರಿಂದ 2024 ಫೆಬ್ರವರಿ ತನಕದ ಪ್ರಸಾರಾಂಗ ವಿಭಾಗಕ್ಕೆ ಒದಗಿಸಲಾದ ಅನುದಾನ ವೆಚ್ಚದ ವಿವರಗಳು, ಪ್ರಕಟಣೆ ಮತ್ತು ಮಾರಾಟ ವೆಚ್ಚದ ವಿವರಗಳು, ನಡೆಸಲಾದ ಪ್ರಚಾರೋಪಾನ್ಯಾಸ ಮಾಲೆ ಹಾಗೂ ಸದರಿ ಅವಧಿಗೆ ಕರ್ತವ್ಯ ನಿರ್ವಹಿಸಿದ ಅಧಿಕಾರಿ, ನೌಕರ–ಸಿಬ್ಬಂದಿಗಳಿಗೆ ಭರಿಸಲಾದ ವೇತನ ಭತ್ಯೆ ಹಾಗೂ ಪ್ರಭಾರ ಭತ್ಯೆಗಳ ಕುರಿತ ಚರ್ಚೆ ಹಾಗೂ ತೀರ್ಮಾನಗಳಿಗೆ ಮಂಡಿಸಿದೆ ಎಂದರು.

   ನಿರ್ದೇಶಕರು, ಪ್ರಸಾರಾಂಗ ಇವರು ಒದಗಿಸಿದ ಲಿಖಿತ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು. ಸದರಿ ಮಾಹಿತಿಯ ಕುರಿತು ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಪ್ರಸಾರಾಂಗದ ಕಾರ್ಯಚಟುವಟಿಕೆಗಳ ಕುರಿತಾಗಿ ಪರಿಶೀಲಿಸಲು ಸಿಂಡಿಕೇಟ್ ಸದಸ್ಯರಾದ ಡಾ.ಅನಂತ, ಎಸ್. ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ವರದಿ ಪಡೆಯಲು ಸಭೆಯು ನಿರ್ಣಯಿಸಿತು.



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

2) ಶ್ರೀ ವಿದ್ಯಾಶಂಕರ್, ಎಂ.ಎಚ್. ಸಹಾಯಕ ಪ್ರಾಧ್ಯಾಪಕರು ಅವರ ಪಿ.ಹೆಚ್.ಡಿ ಮಾಹಿತಿ – ಶ್ರೀ ವಿದ್ಯಾಶಂಕರ್ ಎಂ.ಎಚ್. ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರ ಪಿ.ಹೆಚ್.ಡಿ ಪ್ರಮಾಣ ಪತ್ರದ ಬಗೆಗೆ ಸರ್ಕಾರಕ್ಕೆ ಮಾಹಿತಿ ಒದಗಿಸಲಾಗಿದೆಯೇ? ಈ ಬಗೆಗೆ ಪೂರ್ಣ ವಿವರಗಳನ್ನು ಸಭೆಗೆ ಮಂಡಿಸುವುದು.

ಉಪಕುಲಸಚಿವರು, ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ ಇವರು ನೀಡಿರುವ ಲಿಖಿತ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು ಮತ್ತು ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಇರುವುದರಿಂದ ಇದರ ಕುರಿತಾಗಿ ಸಭೆಯಲ್ಲಿ ಯಾವುದೇ ಚರ್ಚೆ ನಡೆಸುವುದು ಸರಿಯಲ್ಲವೆಂಬುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

3) ಪದವಿ ಕಾಲೇಜುಗಳ ಅರ್ಹ ಪ್ರಾಧ್ಯಾಪಕರಿಗೆ ಪಿಹೆಚ್.ಡಿ ಮಾರ್ಗದರ್ಶನಕ್ಕೆ ಅವಕಾಶ ನೀಡುವ ಬಗೆಗೆ – ಪದವಿ ಕಾಲೇಜುಗಳಲ್ಲಿರುವ ಅರ್ಹ ಪ್ರಾಧ್ಯಾಪಕರಿಗೆ ಪಿಹೆಚ್.ಡಿ ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡುವ ಅವಕಾಶಕ್ಕಾಗಿ ಕೋರಿ ಬಹುದಿನಗಳ ಬೇಡಿಕೆ ಇದೆ. ಈ ಬಗೆಗೆ ಚರ್ಚೆ ಮತ್ತು ತೀರ್ಮಾನಕ್ಕಾಗಿ ಪ್ರಸ್ತಾವನೆ ಮಂಡಿಸಿದೆ.

ಇದರ ಕುರಿತಾಗಿ ಶೈಕ್ಷಣಿಕ ವಿಭಾಗ ನೀಡಿದ ಲಿಖಿತ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ಪಿಹೆಚ್.ಡಿ., ವಿನಿಯಮ 2017ರ ಕ್ರ.ಸಂ. 27ರನ್ವಯ ಕಾಲೇಜು ನಿಗದಿತ ವಿಷಯಕ್ಕೆ ಸಂಶೋಧನಾ ಕೇಂದ್ರ ಎಂದು ಮಾನ್ಯತೆ ಪಡೆಯಬೇಕಾಗುತ್ತದೆ. ಸಂಶೋಧನಾ ಕೇಂದ್ರವೆಂದು ಮಾನ್ಯತೆ ಪಡೆದ ಪದವಿ ಕಾಲೇಜುಗಳ ಅರ್ಹ ಅಧ್ಯಾಪಕರನ್ನು ಮಾರ್ಗದರ್ಶಕರನ್ನಾಗಿ ಮಾನ್ಯ ಮಾಡಲು ಅವಕಾಶವಿದೆ ಎಂದರು.

4) ನ್ಯಾಕ್ ಪ್ರಕ್ರಿಯೆ ಕುರಿತು ಮಾಹಿತಿ – ಐ.ಕ್ಯೂ.ಎ.ಸಿ. ವಿಭಾಗದಿಂದ ನ್ಯಾಕ್ ಪ್ರಕ್ರಿಯೆಗೆ ನಮ್ಮ ವಿಶ್ವವಿದ್ಯಾಲಯ ಒಳಪಡುತ್ತಿರುವುದರಿಂದ ಉನ್ನತ ಶ್ರೇಣಿ ಪಡೆಯುವಲ್ಲಿ ಕೈಗೊಂಡಿರುವ ಉಪಕ್ರಮಗಳನ್ನು ಕುರಿತ ಚರ್ಚೆ ಹಾಗೂ ತೀರ್ಮಾನಗಳಿಗೆ ಮಂಡಿಸಿದೆ.

ನಿರ್ದೇಶಕರು, ಐ.ಕ್ಯೂ.ಎ.ಸಿ. ಇವರು ಒದಗಿಸಿದ ಲಿಖಿತ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಕುಲಪತಿಯವರು, ಐ.ಕ್ಯೂ.ಎ.ಸಿ. ವಿಭಾಗವು ಬಿರುಸಿನಿಂದ ಕಾರ್ಯನಿರ್ವಹಿಸುತ್ತಿದೆ. ನ್ಯಾಕ್ ಮರುಮಾನ್ಯತೆಗೆ ಪೂರ್ವದಲ್ಲಿ Academic and Administrative Audit (AAA), Green Audit and Energy Audit ಗಳನ್ನು ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಸದಸ್ಯರಾದ ಡಾ.ಸಣ್ಣಹನುಮಪ್ಪರವರು ಮಾತನಾಡಿ, ನ್ಯಾಕ್ ಭೇಟಿ ಹಿನ್ನೆಲೆಯಲ್ಲಿ ಯಾವುದೇ ಕ್ರಮಗಳಿದ್ದಲ್ಲಿ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬಹುದಾಗಿದ್ದು, ಇದಕ್ಕೆ ಸಿಂಡಿಕೇಟ್‌ನ ಬೆಂಬಲ ಇರುತ್ತದೆ ಎಂದರು.

**2024–ಸಿಂ–2.29(ಸಿ): ಡಾ. ಅನಂತ, ಎಸ್.,**

1) ವಿವಿಧ ವೃಂದವಾರು ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಯನುಸಾರ ಅರ್ಹ ನೌಕರರಿಗೆ ಬಡ್ತಿ ನೀಡಲು ಕ್ರಮಕೈಗೊಳ್ಳುವ ಕುರಿತು.

ಡಾ. ಅನಂತ, ಎಸ್., ರವರು ಮಾತನಾಡಿ, ಅಧ್ಯಾಪಕೇತರ ನೌಕರರ ಬಡ್ತಿಗೆ ಸಂಬಂಧಿಸಿದಂತೆ ಸುಮಾರು 10 ವರ್ಷಗಳ ನಂತರದಲ್ಲಿ ಬಡ್ತಿಗಳನ್ನು ಹಿಂಪಡೆದಿದ್ದು ಈ 10 ವರ್ಷಗಳ ಅವಧಿಯಲ್ಲಿ ಹಿರಿಯ ಸಹಾಯಕ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆಗೆ ಬಡ್ತಿ ಪಡೆದ ಕೆಲವು ನೌಕರರಿಗೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಹಿಂಬಡ್ತಿ ನೀಡಲಾಗಿದೆ. ಸರ್ಕಾರದಿಂದ ಮಂಜೂರಾದ ಹಿರಿಯ ಸಹಾಯಕ ವೃಂದದ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅರ್ಹತಾ ದಿನಾಂಕವನ್ನು ನಿಗದಿಪಡಿಸಿ ಬಡ್ತಿಯನ್ನು ಪರಿಗಣಿಸಲು ನಿಯಮಾನುಸಾರ ಅವಕಾಶವಿದ್ದರೂ ಸಹ ವಿಶ್ವವಿದ್ಯಾಲಯದ ಆಡಳಿತಾಂಗವು ಈ ಪ್ರಕ್ರಿಯೆಯನ್ನು ಕೈಗೊಳ್ಳದೆ ವಿಳಂಬ ನೀತಿ ಅನುಸರಿಸಿದ್ದು, ಇದರಿಂದ ಬಡ್ತಿಗೆ ಅವಕಾಶವಿರುವ ಹಲವಾರು ನೌಕರರಿಗೆ ಅನ್ಯಾಯವಾಗಿರುತ್ತದೆ. ಆದ್ದರಿಂದ, ವಿವಿಧ ವೃಂದವಾರು ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕೇತರ



ಕುಲಸಚಿವರು

Scanned with OKEN Scanner

ನೌಕರರ ಜೇಷ್ಠತಾಪಟ್ಟಿಯನುಸಾರ ಅರ್ಹ ನೌಕರರಿಗೆ ಬಡ್ತಿ ನೀಡಲು ಕೂಡಲೇ ಕ್ರಮಕೈಗೊಳ್ಳಬೇಕಾಗಿ ಕೋರಲಾಗಿತ್ತು. ಈ ಸಂಬಂಧ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ಪರಿಶೀಲಿಸಿ ಆದಷ್ಟು ಶೀಘ್ರವಾಗಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದಾಗಿ ಸಭೆಯಲ್ಲಿ ತಿಳಿಸಿದ್ದರು. ಇದರ ಪ್ರಗತಿಯ ವಿವರವನ್ನು ಕೋರಲಾಗಿದೆ.

ಕುಲಸಚಿವರು ಮಾತನಾಡುತ್ತಾ, ಹುದ್ದೆಗಳ ಉನ್ನತೀಕರಣ ಪರಿನಿಯಮಕ್ಕೆ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ನೀಡಲಾಗಿದ್ದ ಬಡ್ತಿಗಳನ್ನು ಪರಿಷ್ಕರಣೆಗಾಗಿ ಹಿಂಪಡೆದಿದ್ದು, ಪ್ರಸ್ತುತ ಅಧ್ಯಾಪಕೇತರ ನೌಕರರುಗಳ 2018 ರಿಂದ 2023ರವರೆಗಿನ ಜೇಷ್ಠತಾ ಪಟ್ಟಿ ಸಿದ್ಧಪಡಿಸಲು ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಸಿದ್ಧಪಡಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ನೌಕರರುಗಳಿಂದ ಆಕ್ಷೇಪಣೆ /ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಆದಷ್ಟು ಬೇಗನೆ ಅರ್ಹ ನೌಕರರಿಗೆ ಜೇಷ್ಠತೆ ಹಾಗೂ ರೋಸ್ಟರ್ ಆಧರಿಸಿ ಬಡ್ತಿ ನೀಡಲಾಗುವುದು ಎಂದರು.

2) ಡಾ. ಸುರೇಶ್ ಎಂ. ಸಹ ಪ್ರಾಧ್ಯಾಪಕರು, ಎಂ.ಸಿ.ಎ/ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗ ಹಾಗೂ ಶ್ರೀ ಕರಿಯಪ್ಪ ಎಂ. ಶಾಖಾಧಿಕಾರಿಗಳು, ಪ್ರಸಾರಾಂಗ, ಇವರನ್ನು ಅಮಾನತ್ತುಗೊಳಿಸಿರುವ ಕುರಿತು.

ಡಾ. ಅನಂತ, ಎಸ್., ರವರು ವಿಷಯ ಮಂಡಿಸಿ ಮಾತನಾಡುತ್ತಾ, ಕುವೆಂಪು ವಿಶ್ವವಿದ್ಯಾಲಯದ ದಿನಾಂಕ:02/03-01-2024ರ ಆದೇಶದಂತೆ ಡಾ. ಸುರೇಶ್ ಎಂ., ಹಾಗೂ ಶ್ರೀ ಕರಿಯಪ್ಪ, ಎಂ., ಇವರುಗಳನ್ನು ಅಮಾನತ್ತುಗೊಳಿಸಲಾಗಿದೆ. ಈ ಸಂಬಂಧ ದಿನಾಂಕ:16-02-2024ರ ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿತ್ತು. ಮಾನ್ಯ ಕುಲಪತಿಗಳು ಈಗಾಗಲೇ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಕೆವಿಯಟ್ ಅನ್ನು ಹಾಕಿದ್ದು, ಅದನ್ನು ತೆರವುಗೊಳಿಸದೆ ವಿಚಾರಣಾ ಸಮಿತಿಯನ್ನು ರಚಿಸಲು ಆಗುವುದಿಲ್ಲ. ಎಂದಿದ್ದರು. ಆದರೆ ನ್ಯಾಯಾಲಯದ ಕೆವಿಯಟ್‌ಗೂ, ಅಮಾನತ್ತುಗೊಂಡಿರುವ ಸಿಬ್ಬಂದಿಗಳ ಅಮಾನತ್ತನ್ನು ಹಿಂಪಡೆದು ತನಿಖಾ ಸಮಿತಿಯನ್ನು ರಚಿಸಲು ಯಾವುದೇ ಸಂಬಂಧವಿಲ್ಲದಿರುವುದರಿಂದ ಈ ಸಿಂಡಿಕೇಟ್ ಸಭೆಯಲ್ಲಿಯೇ ತನಿಖಾ ಸಮಿತಿಯನ್ನು ರಚಿಸಲು ಹಾಗೂ ಅಮಾನತ್ತು ಆದೇಶವನ್ನು ಹಿಂಪಡೆಯುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಅವರುಗಳ ಕರ್ತವ್ಯ ಲೋಪದ ಕುರಿತಾಗಿ ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡಿದೆ. ಅದಕ್ಕೆ ಅವರು ನೀಡಿರುವ ಸಮಜಾಯಿಷಿ ಸಮರ್ಪಕವಾಗಿಲ್ಲ. ಕಾನೂನು ಸಲಹೆ ಪಡೆದುಕೊಂಡು, ನಿಯಮಾನುಸಾರ ಅವರನ್ನು ಅಮಾನತ್ತು ಮಾಡಲಾಗಿದೆ. ಅವರುಗಳ ಮೇಲೆ ದೋಷಾರೋಪಣೆ ಪಟ್ಟಿ ಸಿದ್ಧಪಡಿಸಲಾಗುತ್ತಿದ್ದು, ದೋಷಾರೋಪಣ ಪಟ್ಟಿಯನ್ನು ಜಾರಿಗೊಳಿಸಿ ಅವರಿಂದ ವಿವರಣೆ ಪಡೆದು ತುರ್ತಾಗಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿ ಮಧ್ಯಂತರ ವರದಿ ಪಡೆದು, ಈ ಬಗ್ಗೆ ಕಾನೂನು ಸಲಹೆ ಪಡೆದುಕೊಂಡು ಮುಂದಿನ ಕ್ರಮವನ್ನು ಜರುಗಿಸಬಹುದಾಗಿದೆ ಎಂದರು. ಪ್ರೊ.ಚಂದ್ರಶೇಖರ್‌ರವರು ಮಾತನಾಡಿ, ಅವರು ತಪ್ಪು ಎಸಗಿದ್ದಾರೆ ಎಂದು ತಮಗೆ ಅನಿಸಿದ್ದರಿಂದ ಅಮಾನತ್ತುಗೊಳಿಸಿರಬಹುದು. ಕಾನೂನಿನ ಚೌಕಟ್ಟಿನಲ್ಲಿ, ಮಾನವೀಯತೆಯ ಅಂಶಗಳನ್ನು ಪರಿಗಣಿಸಿ ಅವರ ಅಮಾನತ್ತನ್ನು ಹಿಂಪಡೆದು ತನಿಖೆ ನಡೆಸಿರಿ ಎಂದರು. ಮುಂದುವರೆದು, ಮಾತನಾಡಿದ ಕುಲಪತಿಯವರು ಕುಲಪತಿ, ಕುಲಸಚಿವ (ಆಡಳಿತ), ಕುಲಸಚಿವ (ಪರೀಕ್ಷಾಂಗ) ಮತ್ತು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರನ್ನು ಹೊರತುಪಡಿಸಿ ಉಳಿದ ಎಲ್ಲಾ ಸಿಂಡಿಕೇಟ್ ಸದಸ್ಯರು ಅಮಾನತ್ತು ಆದೇಶವನ್ನು ಹಿಂಪಡೆಯಬೇಕೆಂದು ಒತ್ತಾಯಿಸುತ್ತಿದ್ದು, ಇದಕ್ಕೆ ತನ್ನ ಸಹಮತವಿಲ್ಲವೆಂದು ತಿಳಿಸಿದರು.

ಸುಧೀರ್ಘ ಚರ್ಚೆಯ ನಂತರ, ಡಾ.ಸುರೇಶ್, ಎಂ. ಸಹ ಪ್ರಾಧ್ಯಾಪಕರು ಹಾಗೂ ಶ್ರೀ ಕರಿಯಪ್ಪ, ಎಂ., ಶಾಖಾಧಿಕಾರಿ ಇವರ ಆಮಾನತ್ತು ಆದೇಶವನ್ನು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಹಿಂಪಡೆಯಲು ನಿರ್ಣಯಿಸಿದ ಸಭೆಯು, ಅವರುಗಳ ವಿರುದ್ಧ ಹೊರಿಸಲಾಗಿರುವ ಆರೋಪಗಳ ಕುರಿತು ಪರಿಶೀಲಿಸಿ ವಿಚಾರಣೆ ನಡೆಸಲು ಸಮಿತಿಯನ್ನು ರಚಿಸಬೇಕು. ಆರೋಪಗಳ ಕುರಿತು ವಿಚಾರಣೆ ನಡೆಯುವಾಗ ಅವರು ವಿಚಾರಣೆಯ ಮೇಲೆ ಪ್ರಭಾವ ಬೀರಬಾರದು ಎಂಬ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಉದ್ದೇಶದಿಂದ ಡಾ.ಸುರೇಶ್, ಎಂ. ಸಹ ಪ್ರಾಧ್ಯಾಪಕರು ಇವರನ್ನು ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಮತ್ತು ಶ್ರೀ ಕರಿಯಪ್ಪ, ಎಂ. ಶಾಖಾಧಿಕಾರಿ ಇವರನ್ನು ಸ್ನಾತಕೋತ್ತರ ಕೇಂದ್ರ ಚಿಕ್ಕಮಗಳೂರಿಗೆ ವರ್ಗಾಯಿಸಲು ಸಭೆಯು ನಿರ್ಣಯಿಸಿತು.

3) **ಅನುಚ್ಛೇದ 371(ಜೆ(2)(ಬಿ) ಅನ್ವಯ ಮುಂಬಡ್ತಿ ಹಾಗೂ ಇತರ ಐವರು ಸಹಾಯಕ ಕುಲಸಚಿವರ ಬಡ್ತಿ ಹಾಗೂ ವೇತನ ನಿಗದೀಕರಣ ಕುರಿತು.**

ಶ್ರೀ ಸಿದ್ಧಲಿಂಗ ಜಿ. ಪಾಟೀಲ್ ರವರಿಗೆ ಶಾಖಾಧಿಕಾರಿ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಗೆ ದಿನಾಂಕ:01-06-2022ಕ್ಕೆ ಬಡ್ತಿಯನ್ನು ಆದೇಶ ಸಂಖ್ಯೆ:ಕುವಿ:ಮಾಸನಿ-2:654:2023-24, ದಿನಾಂಕ:24-05-2023ರ ಆದೇಶದಂತೆ ನೀಡಲಾಗಿದ್ದು, 24-05-2023 ರಿಂದ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ ಹಾಗೂ ಇತರ ಐವರು ಸಹಾಯಕ ಕುಲಸಚಿವರು 2024ರಲ್ಲಿ ಪರಿಷ್ಕೃತಗೊಳ್ಳುವ ನೌಕರರ ಜೇಷ್ಠತಾ ಪಟ್ಟಿಯೊಳಗೆ ಬಾರದಿರುವುದರಿಂದ ಕೂಡಲೇ ಆರ್ಥಿಕ ಸೌಲಭ್ಯವನ್ನು ನೀಡಬೇಕೆಂದು ಪ್ರಸ್ತಾಪಿಸಲಾಗಿತ್ತು. ಈ ಪ್ರಕರಣದಲ್ಲಿ ಅನಗತ್ಯ ವಿಳಂಬ ಮಾಡದೆ ಕೂಡಲೇ ನ್ಯಾಯ ಒದಗಿಸಿಕೊಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಕುಲಸಚಿವರು ಮಾತನಾಡಿ, ಹಿಂದಿನ ಸಭೆಯಲ್ಲಿ ಈ ಕುರಿತಾಗಿ ಪ್ರಸ್ತಾಪ ಆಗಿದೆ. ಆದಷ್ಟು ಶೀಘ್ರವಾಗಿ ವೇತನ ನಿಗದೀಕರಣ ಆದೇಶ ನೀಡಲಾಗುವುದು ಎಂದರು.

4) ಖಾಸಗಿ ಕಾಲೇಜುಗಳ ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕ ಹಿಂಪಾವತಿ ಮಾಡುವ ಬಗ್ಗೆ.

ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಗೊಳಪಡುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕವನ್ನು ಆನ್‌ಲೈನ್ ಮೂಲಕ ವಿಶ್ವವಿದ್ಯಾಲಯದ ಖಾತೆಗೆ ಕಟ್ಟುತ್ತಾರೆ. ಇದರಲ್ಲಿ ಕಾಲೇಜಿಗೆ ಹಿಂಪಾವತಿಯಾಗುವ ಮೊತ್ತವನ್ನು ಹಲವು ಕಾಲೇಜುಗಳಿಗೆ ಇದುವರೆಗೂ ಪಾವತಿಸಿರುವುದಿಲ್ಲವೆಂದು ದೂರವಾಣಿ ಮೂಲಕ ಮನವಿ ಮಾಡಿರುತ್ತಾರೆ. ಆದ್ದರಿಂದ ಈ ಸಂಬಂಧ ಖಾಸಗಿ ಕಾಲೇಜುಗಳಿಗೆ ಪಾವತಿಯಾಗಬೇಕಾಗಿರುವ ವಿವರವನ್ನು ದಾಖಲೆಗಳೊಂದಿಗೆ ಸಲ್ಲಿಸಲು ಕೋರಿದೆ.

ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಸ್ನಾತಕ ಪದವಿಯ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಖಾಸಗಿ ಕಾಲೇಜಿನವರು ವಿಶ್ವವಿದ್ಯಾಲಯದ ಪ್ರವೇಶಾತಿ ಶುಲ್ಕ ಮಾತ್ರ ವಿಷಯವಾರು ವಿಶ್ವವಿದ್ಯಾಲಯಕ್ಕೆ ಪಾವತಿಸಿರುತ್ತಾರೆ. ಅದರಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಶುಲ್ಕವನ್ನು ವಿಶ್ವವಿದ್ಯಾಲಯದಲ್ಲಿ ಪಾವತಿಸಿಕೊಳ್ಳುತ್ತಿಲ್ಲ ಎಂದು ಶೈಕ್ಷಣಿಕ ವಿಭಾಗದವರು ನೀಡಿದ ಮಾಹಿತಿಯನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2024-ಸಿಂ-2.29(ಡಿ):** **ಡಾ. ಪರಮೇಶ್ವರ ಮಸಲವಾಡ,**

1) ಸದಸ್ಯತ್ವದ ಜೇಷ್ಠತೆಯ ಅನುಸಾರ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸಿಂಡಿಕೇಟ್ / ವಿದ್ಯಾವಿಷಯಕ ಪರಿಷತ್ತಿನ ಮೀಸಲಾತಿಯ ಕುರಿತಂತೆ ತೆಗೆದುಕೊಂಡಿರುವ ನಿರ್ಧಾರದ ಕುರಿತು ವಿಶ್ವವಿದ್ಯಾಲಯದ ನಿಯಮಾವಳಿಗಳ ಮಾಹಿತಿಯನ್ನು ಒದಗಿಸುವುದು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ,2000 ಪ್ರಕರಣ-28 (ಎಫ್) ಪ್ರಕಾರ ಜೇಷ್ಠತೆಗನುಸಾರವಾಗಿ ಹಾಗೂ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರು, ಅವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗಿರತಕ್ಕದ್ದು ಎಂದು ತಿಳಿಸಿದೆ. ಈ ನಿಯಮದಂತೆ ಪ್ರಾಂಶುಪಾಲರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಪ್ರಕರಣ-30 (VI) ಪ್ರಕಾರ ಜೇಷ್ಠತೆಗನುಸಾರವಾಗಿ ಹಾಗೂ ಸರದಿಯ ಮೇಲೆ ಎರಡು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ಹತ್ತು ಜನ ಪ್ರಾಂಶುಪಾಲರುಗಳನ್ನು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2) ವಿಶ್ವವಿದ್ಯಾಲಯದ ಶುಲ್ಕವನ್ನು ಭರಿಸಿ ಒಮ್ಮೆ ಅನುಮೋದನೆ ಪಡೆದ ಬಿ.ಇಡಿ. ಕಾಲೇಜುಗಳ



ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ

Scanned with OKEN Scanner

ಉಪನ್ಯಾಸಕರುಗಳು ಪ್ರತೀ ವರ್ಷವು ಮುಂದುವರೆದ ಅನುಮೋದನೆಯಲ್ಲಿ ವಿಶ್ವವಿದ್ಯಾಲಯವು ಶುಲ್ಕವನ್ನು ತೆಗೆದುಕೊಳ್ಳುವ ಕುರಿತು ತೆಗೆದುಕೊಂಡ ನಿಯಮಾವಳಿಗಳ ಮಾಹಿತಿಯನ್ನು ಒದಗಿಸುವುದು ಎಂದರು.

ಇದರ ಕುರಿತಾಗಿ ಈಗಾಗಲೇ ವಿಷಯ ಸಂಖ್ಯೆ:2024–ಸಿಂ–2.27ರಲ್ಲಿ ಚರ್ಚೆ ಹಾಗೂ ನಿರ್ಣಯವಾಗಿರುತ್ತದೆ ಎಂಬುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

3) ಬಿ.ಇಡಿ. ಪದವಿಗೆ ಸಂಬಂಧಿಸಿದಂತೆ ಬಿ.ಓ.ಇ. ಅಧ್ಯಕ್ಷರ ನೇಮಕಾತಿಯಲ್ಲಿನ ಕುರಿತಂತೆ ವಿಶ್ವವಿದ್ಯಾಲಯದ ನಿಯಮಾವಳಿಗಳ ಮಾಹಿತಿಯನ್ನು ಒದಗಿಸುವುದು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಬಿ.ಇಡಿ. ಪದವಿಗೆ ಸಂಬಂಧಿಸಿದಂತೆ ಬಿ.ಓ.ಇ. ಅಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ-2000 ಪ್ರಕರಣ (36)ರಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸುತ್ತಾ, ಸದರಿ ನಿಯಮದ ಪ್ರತಿಯನ್ನು ಸದಸ್ಯರಿಗೆ ಒದಗಿಸಲಾಗಿದೆ ಎಂದರು.

4) ವಿಶ್ವವಿದ್ಯಾಲಯದ ಘನತೆಗೆ ಸಂಬಂಧಿಸಿದಂತೆ ಕೆಲವು ವ್ಯಕ್ತಿಗಳು ಪತ್ರಿಕೆಗಳಿಗೆ ತಪ್ಪು ಮಾಹಿತಿಯನ್ನು ನೀಡಿ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ತರುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಕೈಗೊಳ್ಳುವ ಕ್ರಮದ ಮಾಹಿತಿ ಒದಗಿಸುವಂತೆ ಕೋರಿದರು.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು ಸುದೀರ್ಘ ಚರ್ಚೆಯ ನಂತರ ಈ ಕೆಳಗಿನಂತೆ ಸರ್ವಾನುಮತದ ನಿರ್ಣಯ ಕೈಗೊಂಡಿತು.

ಎ)ಯಾವುದೇ ಸಂಘಟನೆಯವರು/ಸಂಘ ಸಂಸ್ಥೆಗಳು/ವ್ಯಕ್ತಿಗಳು ವಿಶ್ವವಿದ್ಯಾಲಯದ ಅನುಮೋದನೆ ಪಡೆಯದೇ ವಿಶ್ವವಿದ್ಯಾಲಯದ ಕ್ಯಾಂಪಸ್‌ನೊಳಗೆ ಬಂದು ಪ್ರತಿಭಟನೆ ನಡೆಸಲು ಅಥವಾ ವಿದ್ಯಾರ್ಥಿಗಳು, ಅಧ್ಯಾಪಕ/ ಅಧ್ಯಾಪಕೇತರ ಸಿಬ್ಬಂದಿಗಳು ಮತ್ತು ಅಧಿಕಾರಿಗಳಿಗೆ ಬೆದರಿಕೆ ಒಡ್ಡಲು ಅವಕಾಶ ನೀಡಬಾರದು

ಬಿ) ವಿಶ್ವವಿದ್ಯಾಲಯದ ವಿರುದ್ಧ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದ ಪ್ರಕರಣಗಳಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಸಂಬಂಧಪಟ್ಟ ವಿಭಾಗದಿಂದ ಮಾಹಿತಿ ಪಡೆದು ಸ್ಪಷ್ಟನೆ ನೀಡಬೇಕು.

ಸಿ) ವಿಶ್ವವಿದ್ಯಾಲಯದ ವಿರುದ್ಧ ಮಾಧ್ಯಮಗಳಿಗೆ ಯಾವುದೇ ವ್ಯಕ್ತಿ/ಸಂಘಟನೆ ನೀಡುವ ಮಾಹಿತಿಯನ್ನು ವರದಿ ಮಾಡುವ ಮುನ್ನ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ ಅಗತ್ಯ ಮಾಹಿತಿ/ಸ್ಪಷ್ಟೀಕರಣಗಳನ್ನು ಪಡೆದುಕೊಂಡು ಕ್ರಮವಹಿಸುವಂತೆ ಮಾಧ್ಯಮಗಳಿಗೆ ಪತ್ರ ಬರೆಯಬೇಕು.

**2024–ಸಿಂ–2.30: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2024–ಸಿಂ–2.31: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ನ್ಯಾಕ್ ಮರುಮೌಲ್ಯಮಾಪನಕ್ಕೆ ಅಗತ್ಯವಿರುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಇದಕ್ಕಾಗಿ ಕೆಲವು ಮೂಲಭೂತ ಸೌಲಭ್ಯಗಳು ಅಗತ್ಯವಿದ್ದು, ಅವುಗಳಿಗಾಗಿ ವಿಶ್ವವಿದ್ಯಾಲಯದ ಜನರಲ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಶೀರ್ಷಿಕೆಯಿಂದ ವಿಶೇಷ ಅನುದಾನ ಒದಗಿಸಿದೆ. ಈ ಹಿನ್ನೆಲೆಯಲ್ಲಿ, ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿದರು. ಸದಸ್ಯರಾದ ಡಾ.ಸಣ್ಣಹನುಮಪ್ಪರವರು ಮಾತನಾಡಿ, ನ್ಯಾಕ್ ಸಂಬಂಧಿತ ಕೆಲಸಗಳನ್ನು ವಿಶ್ವವಿದ್ಯಾಲಯವು ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ಇದಕ್ಕೆ ಸಿಂಡಿಕೇಟ್‌ನ ಸಹಕಾರ ಇರುತ್ತದೆ ಎಂದರು.

ಚರ್ಚೆಯ ನಂತರ ನ್ಯಾಕ್ ಮರುಮೌಲ್ಯಮಾಪನಕ್ಕೆ ಅಗತ್ಯವಿರುವ ವೆಚ್ಚಗಳನ್ನು ಭರಿಸಲು ಅನುಮತಿಸಿದ ಸಭೆಯು ಖರೀದಿ ಮತ್ತು ಸೇವೆಗಳಲ್ಲಿ ಕೆ.ಟಿ.ಟಿ.ಪಿ., ನಿಯಮಗಳನ್ನು ಪಾಲಿಸಬೇಕೆಂದು ನಿರ್ಣಯಿಸಿತು.

ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ



Scanned with OKEN Scanner

**2024-ಸಿಂ-2.31(ಎ):** ಸದಸ್ಯರಾದ ಡಾ.ಪರಮೇಶ ಮಸಲವಾಡರವರು ಮಾತನಾಡಿ, ವಿಶ್ವವಿದ್ಯಾಲಯದ ವಾಹನಗಳನ್ನು ಶಾಸನಬದ್ಧ ಅಧಿಕಾರಿಗಳಿಗೆ ಮಾತ್ರ ಒದಗಿಸಬೇಕು. ಉಳಿದ ಅಧಿಕಾರಿಗಳಿಗೆ ನೀಡಿದ್ದಲ್ಲಿ ಹಿಂಪಡೆಯಬೇಕು ಎಂದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ತಿಳಿಸಿದರು.

**2024-ಸಿಂ-2.31(ಬಿ):** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಹಿಂದಿನ ವರ್ಷಗಳಲ್ಲಿ ಪ್ರವೇಶ ಪಡೆದು ಪರೀಕ್ಷೆ ಬರೆದು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ/ಪರೀಕ್ಷೆ ತೆಗೆದುಕೊಳ್ಳಲಾಗದ ದೂರಶಿಕ್ಷಣದ ಕೆಲವು ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಹಿಂದೆ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಗಳು ಈಗ ಉದ್ಯೋಗ ಮತ್ತಿತರ ಕಾರಣಗಳಿಂದ ರಾಜ್ಯದ ವಿವಿಧ ಸ್ಥಳಗಳಲ್ಲಿ ನೆಲೆಸಿದ್ದಾರೆ. ಅಂತಹ ವಿದ್ಯಾರ್ಥಿಗಳು ಇಚ್ಚಿಸಿದ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರ ಬದಲಾವಣೆ ಶುಲ್ಕದಿಂದ ವಿನಾಯಿತಿ ನೀಡುವಂತೆ ಕೋರಿದ್ದಾರೆ. ಇದನ್ನು ಸಭೆಯ ಅನುಮೋದನೆಗೆ ಸಲ್ಲಿಸಿದೆ ಎಂದರು.

ಚರ್ಚೆಯ ನಂತರ ದೂರಶಿಕ್ಷಣದ ವಿದ್ಯಾರ್ಥಿಗಳಿಗೆ ಅವರು ಇಚ್ಚಿಸುವ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವ ಸಲುವಾಗಿ ಪರೀಕ್ಷಾ ಕೇಂದ್ರ ಬದಲಾವಣೆಯ ಶುಲ್ಕದಿಂದ ವಿನಾಯಿತಿ ನೀಡಲು ಸಭೆಯು ನಿರ್ಣಯಿಸಿತು.

**2024-ಸಿಂ-2.31(ಸಿ):** ಸದಸ್ಯರಾದ ಡಾ.ಅನಂತ, ಎಸ್.ರವರು ಮಾತನಾಡಿ, ವಿಶ್ವವಿದ್ಯಾಲಯದ ಕೆಲವು ಉಪಕುಲಸಚಿವರು/ ಸಹಾಯಕ ಕುಲಸಚಿವರಿಗೆ 6 ತಿಂಗಳ ಅವಧಿಗೆ ಸ್ವತಂತ್ರ ಪ್ರಭಾರದಲ್ಲಿ ಇರಿಸಿ, ಪ್ರಭಾರ ಭತ್ಯೆ ಪಡೆಯಲು ಆದೇಶ ನೀಡಲಾಗಿದೆ. ಆದರೆ, ಕೆಲವರಿಗೆ ಮುಂದಿನ ಆದೇಶದವರೆಗೆ ಎಂದು ನೀಡಲಾಗಿದೆ. ಹೀಗೆ 2 ರೀತಿಯ ಆದೇಶ ನೀಡುವುದು ಸರಿಯಲ್ಲ. ಎಲ್ಲರಿಗೂ ಒಂದೇ ರೀತಿಯ ಆದೇಶ ನೀಡಬೇಕು ಎಂದರು. ಡಾ. ಸಣ್ಣಹನುಮಪ್ಪರವರು ಮಾತನಾಡಿ, ಸರ್ಕಾರದಲ್ಲಿ ವರ್ಗಾವಣೆ/ನಿವೃತ್ತಿ/ಮರಣ ಮುಂತಾದ ಕಾರಣಗಳಿಂದ ಖಾಲಿ ಇರುವ ಹುದ್ದೆಗೆ ಬೇರೊಬ್ಬರು ವರ್ಗಾವಣೆಯಾಗಿ ಬರುವವರೆಗೆ ಲಭ್ಯವಿರುವ ಕಿರಿಯ ಅಧಿಕಾರಿ/ನೌಕರರು ಆ ಹುದ್ದೆಯ ಪ್ರಭಾರದಲ್ಲಿ ಇರುತ್ತಾರೆ ಎಂದರು.

ಡಾ.ಅನಂತ, ಎಸ್., ರವರು ಮಾತನಾಡಿ, ಎಲ್ಲರಿಗೂ ಸಮನಾದ ಪ್ರಭಾರ ಭತ್ಯೆ ಮಂಜೂರು ಮಾಡಿ. ಇಲ್ಲವಾದಲ್ಲಿ ಅರ್ಹ ಸಹಾಯಕ ಕುಲಸಚಿವರಿಗೆ ಆದಷ್ಟು ಬೇಗನೆ ಉಪಕುಲಸಚಿವರ ಹುದ್ದೆಗಳಿಗೆ ನಿಯಾನುಸಾರ ಬಡ್ತಿ ನೀಡಿದಲ್ಲಿ ಸ್ವತಂತ್ರ ಪ್ರಭಾರ ಮತ್ತು ಭತ್ಯೆ ನೀಡುವ ಅವಶ್ಯಕತೆಯೇ ಇರುವುದಿಲ್ಲ. ಇದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಉಳಿತಾಯವಾಗುತ್ತದೆ, ನೌಕರರಿಗೂ ಅನುಕೂಲವಾಗುತ್ತದೆ ಎಂದರು.

ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

**2024-ಸಿಂ-2.31(ಡಿ):** ಸದಸ್ಯರಾದ ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಕೆಲವು ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಆಡಳಿತವು ಕ್ರಮಕೈಗೊಂಡು ನಂತರ ಸಿಂಡಿಕೇಟ್ ಸಭೆಯ ಅನುಮೋದನೆ/ಸ್ಥಿರೀಕರಣಕ್ಕಾಗಿ ಮಂಡಿಸುವ ಪ್ರಕ್ರಿಯೆ ಸರಿಯಲ್ಲ. ಹೆಚ್ಚುವರಿ (ಟೇಬಲ್) ಅಜೆಂಡಾಗಳನ್ನು ಕೂಡ ಕಡಿಮೆ ಮಾಡಿ. ನಿಗದಿತ ಅವಧಿಯಲ್ಲಿ ಬರುವ ವಿಷಯಗಳನ್ನು ಮಾತ್ರ ಮಂಡಿಸಬೇಕು. ಸಭೆಯಲ್ಲಿ ಅಜೆಂಡಾ ಪ್ರಕಾರ ವಿಷಯವಾರು ಚರ್ಚೆಮಾಡಿ, ಸಮರ್ಪಕ ನಿರ್ಣಯ ಕೈಗೊಳ್ಳಬೇಕು. ಸಭೆಗೆ ಮಂಡಿಸಲಾಗುವ ವಿಷಯಗಳು ಸಮರ್ಪಕವಾಗಿದ್ದಲ್ಲಿ, ನಿಯಮಗಳು/ ಕಾನೂನಿನ ಚೌಕಟ್ಟಿನಲ್ಲಿ ನಿರ್ಣಯಗಳಾಗಲಿ ಎಂದು ಸಲಹೆ ನೀಡಿದರು. ಮುಂದುವರೆದು ಮಾತನಾಡಿದ ಅವರು ವಿಶ್ವವಿದ್ಯಾಲಯದ ಎಲ್ಲಾ ಟೆಂಡರ್ ಪರಿಶೀಲನಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸೇರ್ಪಡೆಗೊಳಿಸಬೇಕು ಎಂದರು.

ಸದಸ್ಯರು ನೀಡಿದ ಅಮೂಲ್ಯ ಸಲಹೆಗಳನ್ನು ಪಾಲಿಸುವಂತೆ ಎಲ್ಲಾ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಸಚಿವರು
ಕು.ವಿ./ ಜ್ಞಾನಸಹ್ಯಾದ್ರಿ



Scanned with OKEN Scanner

ದಿನಾಂಕ: 01-03-2024ರಂದು ಕುಲಪತಿ ಹುದ್ದೆಯ ಅವಧಿ ಕೊನೆಗೊಳ್ಳಲಿರುವುದರಿಂದ ಪ್ರೊ.ಎಸ್.ವೆಂಕಟೇಶ್‌ರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾನ್ಯ ಕುಲಪತಿಯವರು ನನಗೆ ದೊರೆತ ಅಲ್ಪ ಅವಧಿಯಲ್ಲಿ ಉತ್ತಮ ಸೇವೆ ಸಲ್ಲಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಈ ಅವಧಿಯಲ್ಲಿ ಸಹಕರಿಸಿದ ಎಲ್ಲಾ ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯದ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುಲಸಚಿವ
ಕುವೆಂಪು ವಿಶ್ವವಿದ್ಯಾಲಯ.
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಕುಲಪತಿಗಳು
ಕುಲಪತಿಗಳು
ಕು.ವಿ. ಶಂಕರಘಟ್ಟ



Scanned with OKEN Scanner